11.30 ಎ.ಎಂ.

ನಿಲುವಳಿ ಸೂಚನೆ (ಅನುಮತಿ ಕೋರಿ ಪ್ರಸ್ತಾವನೆ)

ಬಾಗಲಕೋಟೆ ಮುಳುಗಡೆ ಪ್ರದೇಶದ ರೈತರಿಗೆ ನೀಡುತ್ತಿರುವ ಪರಿಹಾರಧನದಲ್ಲಿ ತಾರತಮ್ಯ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ ಬಾಗಲಕೋಟೆ ಮುಳುಗಡೆ ಪ್ರದೇಶದ ಸಮಸ್ಯೆಯ ಬಗ್ಗೆ ಸುಮಾರು 8-10 ಜನ ಶಾಸಕರು ಈಗಾಗಲೇ ಅಲ್ಲಿ ಸತ್ಯಾಗ್ರಹ ಕುಳಿತ್ತಿದ್ದಾರೆ. ಈ ಸತ್ಯಾಗ್ರಹದಲ್ಲಿ ಪಾರ್ಲಿಮೆಂಟ್ ಸದಸ್ಯರೂ ಸಹ ಇದ್ದಾರೆ. ಇಲ್ಲಿರತಕ್ಕಂಥ ಸಣ್ಣ ಪುಟ್ಟ ತೊಂದರೆಗಳು ಮಾನ್ಯ ನಾಗೇಗೌಡರವರಿಗೆ ಮತ್ತು ಮಾನ್ಯ ಸೋಮಶೇಖರ್‌ರವರಿಗೂ ಸಹ ಗೊತ್ತಿದೆ. ಈ ಸತ್ಯಾಗ್ರಹದಲ್ಲಿ ಕಾಂಗ್ರೆಸಿನ ಸದಸ್ಯರು ಮತ್ತು ಬಿಜೆಪಿ ಹಾಗೂ ಲೋಕಶಕ್ತಿ ಸದಸ್ಯರು, ಜನತಾದಳದ ಸದಸ್ಯರು ಕೂಡ ಭಾಗವಹಿಸಿದ್ದಾರೆ. ಇಲ್ಲಿ ಯಾವುದೇ ಪಕ್ಷದ ವತಿಯಿಂದ ಕುಳಿತುಕೊಂಡಿಲ್ಲ.

ಉಪಾದ್ಯಕ್ಷರು : ಮೊದಲು ಬೇಡಿಕೆಗಳ ಮೇಲೆ ಚರ್ಚೆ ಮಾಡೋಣ ನಂತರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಇವತ್ತು ಅರ್ಧ ದಿವಸ ಅದಿವೇಶನ ಇರುತ್ತದೆ. ಆದ್ದರಿಂದ ಬೇಡಿಕೆ ಮೇಲೆ ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರ್ಧ ಗಂಟೆಯೊಳಗೆ ಮುಗಿಸಿಕೊಡುತ್ತೇನೆಂದು ನಾನು ಪ್ರಾಮಿಸ್ ಮಾಡುತ್ತೇನೆ. ಈ ಪ್ರಶ್ನೆ ಪ್ರಾರಂಭವಾದ ಮೇಲೆ ಸರ್ಕಾರದ ಉತ್ತರವನ್ನು ತಿಳಿದುಕೊಂಡು, ಸತ್ಯಾಗ್ರಹ ಕುಳಿತುಕೊಂಡಿರುವವರನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮಹತ್ತರವಾದ ವಿಷಯವಾಗಿದೆ ಮತ್ತು ಸರ್ಕಾರ ಕೂಡ ಹಿಂದೇಟು ಹಾಕುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ, ಏಕೆಂದರೆ ಅಲ್ಲಿ ಇವತ್ತು ಸಾವಿರಾರು ಜನ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ನಾವು ಸರ್ಕಾರದ ಪರವಾಗಿ ಉತ್ತರವನ್ನು ಹೇಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಬಾಗಲ್‌ಕೋಟೆ ಮುಳುಗಡೆ ಪ್ರದೇಶ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬರುತ್ತದೆ. ಇದರಿಂದ ಮುಳುಗಡೆಯಾಗಿರುವ ರೈತರಿಗೆ ನೀಡುತ್ತಿರುವ ಪರಿಹಾರಧನದಲ್ಲಿ ತಾರತಮ್ಯ ಇದ್ದು, ಇದರ ವಿರುದ್ಧ ಆ ಭಾಗದ ಎಲ್ಲಾ ಶಾಸಕರು ಮತ್ತು ಪಾರ್ಲಿಮೆಂಟ್ ಸದಸ್ಯರು ಇನ್ನಿತರ ಮುಖಂಡರುಗಳು ಸತ್ಯಾಗ್ರಹವನ್ನು ದಿನಾಂಕ 15-4-1998ರಿಂದ ನಡೆಸುತ್ತಿದ್ದಾರೆ. ಇದರಿಂದ ಆ ಭಾಗದಲ್ಲಿ ಕಾನೂನು ಮತ್ತು ಶಾಂತಿ ಪಾಲನೆಗೆ ಧಕ್ಕೆ ಬರುವ ಸಂಭವವಿದೆ. ಇದೊಂದು ಮಹತ್ವದ ವಿಷಯವಾಗಿರುವುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ನೋಟೀಸನ್ನು ಕೊಟ್ಟಿದ್ದೇವೆ ಮತ್ತು ಮಾನ್ಯ ಸುರೇಶ್‌ಕುಮಾರ್‌ರವರೂ

ಕೂಡ ಬರೆದುಕೊಟ್ಟಂತೆ ಕಾಣುತ್ತದೆ. ಇವತ್ತು ಅಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಆಗುತ್ತಿರುವುದಕ್ಕೆ ಅಲ್ಲಿನ ಜನ ಯಾವುದೇ ರೀತಿಯ ಅಡ್ಡಿಯಾಗಲಿ ಅಥವಾ ಅಡಚಣೆಯಾಗಲಿ ತರುತ್ತಿಲ್ಲ. ಆದರೆ ಸರ್ಕಾರ ಏನು ಪರಿಹಾರಧನ ಕೊಡುತ್ತೇನೆಂದು ಒಪ್ಪಿಕೊಂಡಿದೆ, ಅದರ ಪ್ರಕಾರ ಅವರಿಗೆ ಪರಿಹಾರಧನ ಸಿಗಬೇಕೆಂಬುದೇ ಅವರ ಬೇಡಿಕೆಯಾಗಿದೆ. ಇವತ್ತು ಲ್ಯಾಂಡ್ ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಅವರಿಗೆ ಏನು ಪರಿಹಾರಧನವನ್ನು ಕೊಡುತ್ತಿದ್ದಾರೆ ಅದರಲ್ಲಿ ಮೂರು ಭಾಗ ಮಾಡಿದ್ದಾರೆ. ಮೊದಲನೆಯದು ಏನೆಂದರೆ ಡ್ರೈ ಲ್ಯಾಂಡ್ ಇರತಕ್ಕಂಥದ್ದಕ್ಕೆ ಸುಮಾರು 55 ಸಾವಿರ ಕೊಡಬೇಕು, ಎರಡನೆಯದು, ಇರಿಗೇಷನ್ ಲ್ಯಾಂಡ್‌ಗೆ 90 ಸಾವಿರ ಕೊಡಬೇಕು ಮತ್ತು ಮೂರನೆಯದು ಏನೆಂದರೆ, ಕಬ್ಬು ಬೆಳೆಯತಕ್ಕಂಥ ಪ್ರದೇಶಕ್ಕೆ ಒಂದು ಲಕ್ಷದ ಇಪ್ಪತ್ತೈದು ಸಾವಿರ ಕೊಡಬೇಕೆಂದು ಈ ರೀತಿಯಾಗಿ ವರ್ಗೀಕರಣ ಮಾಡಿ, ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರಧನವನ್ನು ಕೊಡುತ್ತಿದ್ದಾರೆ. ಆದರೆ ಕಬ್ಬಿನ ಪ್ರದೇಶ ಇರತಕ್ಕಂಥ ಜಮೀನಿನ ಬಗ್ಗೆ ಸರ್ಕಾರಿ ಅಧಿಕಾರಿಗಳು ತಕರಾರು ಮಾಡುತ್ತಿದ್ದಾರೆ. ಅಲ್ಲಿನ ಜನ ವ್ಯಕ್ತಪಡಿಸತಕ್ಕಂಥ ಸಂಶಯ ಏನೆಂದರೆ, ಅಲ್ಲಿ ಇರತಕ್ಕಂಥ ಅಧಿಕಾರಿಗಳಾಗಲಿ, ರಿಹ್ಯಾಬಿಲಿಟೇಷನ್ ಕಮೀಷನರ್ ಆಗಿರುವ ಮಾನ್ಯ ಜಾಮ್‌ದಾರ್‌ರವರು ಇಲ್ಲಿಯವರೆಗೆ ಸರಿಯಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಆದರೆ ಇತ್ತೀಚೆಗೆ ಅವರ ಕೆಳಗಿನ

(ಈ ಹಂತದಲ್ಲಿ ಡಾ|| ಎಂ. ಪಿ. ಕರ್ಕಿರವರು ಪೀಠವನ್ನು ಅಲಂಕರಿಸಿದರು)

ಅಧಿಕಾರಿಗಳ ಹೇಳಿಕೆಯ ಮೇಲೇನು ಅಥವಾ ರೈತರು ಹೆಚ್ಚಿನ ರೀತಿಯಲ್ಲಿ ಬಂದು ಮನೆ ಅಥವಾ ಹೊಲದ ಪರಿಹಾರಧನವನ್ನು ಕೇಳುವಾಗ, ಇವೆಲ್ಲಕ್ಕೂ ಹಣ ಜಾಸ್ತಿ ಆಗುತ್ತದೆ ಎಂಬ ಸಂಶಯದ ಮೇಲೆ ಇವತ್ತಿನದಿವಸ ಪರಿಹಾರಧನವನ್ನು ಕೊಡುವುದರಲ್ಲಿ ತಡೆಹಿಡಿಯತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಅಲ್ಲಿನ ಜನರ ಮತ್ತೊಂದು ಕಳಕಳಿ ಏನೆಂದರೆ ಯಾರು ಮುಳುಗಡೆ ಪ್ರದೇಶದಿಂದ, ಜಮೀನುಗಳನ್ನು ಮತ್ತ ಮನೆ ಹಾಗೂ ವ್ಯಾಪಾರವನ್ನು ಕಳೆದುಕೊಂಡಿದ್ದಾರೆ, ಅಂಥವರ ಮಕ್ಕಳಿಗೆ 15 ಪರ್ಸೆಂಟ್ ಮೀಸಲಾತಿ ಕೊಟ್ಟು ಅಲ್ಲಿನವರಿಗೆ ನೌಕರಿ ಕೊಡಬೇಕೆಂಬುದೇ ಅವರ ಬೇಡಿಕೆ. ಮೂರನೆಯ ಬೇಡಿಕೆ ಏನೆಂದರೆ, ಹಳೆ ಮನೆಗಳೆಂದು ಅವರ ಡಿಪ್ರೀಸಿಯೇಷನ್ ತೆಗೆದು ಪರಿಹಾರಧನವನ್ನು ಕೊಡುತ್ತಿದ್ದಾರೆ. ಆದರೆ ಈ ಹಳೆ ಮನೆಗಳನ್ನು ಈಗ ಕಟ್ಟಬೇಕಾದರೆ ಲಕ್ಷ ಅಥವಾ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಅಷ್ಟೊಂದು ಹಣ ಇವರು ಕೊಡದೇ ಇದ್ದರೂ ಕೂಡ, ರೀಹ್ಯಾಬಿಲಿಟೇಷನ್ ಸೆಂಟರ್‌ನಲ್ಲಿ 20X20 ಅಡಿಯಷ್ಟು ಒಂದು ರೂಮ್ ಕಟ್ಟಬೇಕಾದರೆ ಇವತ್ತಿನ ಮಾರ್ಕೆಟ್ ಬೆಲೆ ಏನು ಇದೆ ಅಥವಾ ಒಂದು ಮನೆ ಕಟ್ಟುವುದಕ್ಕೆ ಅಂದಾಜು ಖರ್ಚು ಏನಿದೆ, ಅದರ ಆದರದ ಮೇಲಾದರೂ ಕೊಡಬೇಕು. ಇವತ್ತಿನ ದಿವಸ ಅಲ್ಲಿನ ಜನ ತಮ್ಮ ಆಸ್ತಿ-ಪಾಸ್ತಿಯನ್ನೆಲ್ಲಾ ಕಳೆದುಕೊಂಡು, ಈ ಒಂದು ಅತ್ಯಂತ ದೊಡ್ಡ ಪ್ರಾಜೆಕ್ಟ್‌ಕ್ಕೋಸ್ಕರ ರಾಜ್ಯಕ್ಕೆ ಕೊಡುಗೆಯಾಗಿ ಕೊಡುವಾಗ, ಸ್ಯಾಕ್ರಿಫೈಸ್ ಮಾಡುವಾಗ ಕನಿಷ್ಠಪಕ್ಷ ಅವರಿಗೆ ಪರಿಹಾರಧನವನ್ನಾದರೂ ಕೊಡಬೇಕಾಗುತ್ತದೆ. 15 ಪರ್ಸೆಂಟ್ ಡಿಪ್ರೀಸಿಯೇಷನ್ ಹಣವನ್ನು ಕಳೆದುಕೊಡುತ್ತೇವೆಂದು ಹೇಳಿದಾಗ ಅಲ್ಲಿನ ಜನರು ನಾಗೇಗೌಡರ ಹತ್ತಿರ ಹೋದ ಮೇಲೆ, ಡಿಪ್ರೀಸಿಯೇಷನ್ ತೆಗೆದು ಹಾಕಿ, ಪರಿಹಾರಧನವನ್ನು

ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದರು. ಈಗ ಅವರ ಬೇಡಿಕೆ ಏನೆಂದರೆ, ಇವತ್ತು ಸರ್ಕಾರ ಏನು ಮಾರ್ಕೆಟ್ ವ್ಯಾಲ್ಯು ಎಂದು ಫಿಕ್ಸ್ ಮಾಡುತ್ತಿದ್ದೀರಿ, ಅದು ಸರಿ ಇಲ್ಲ. ಒಂದು ವೇಳೆ ಆ ವ್ಯಾಲ್ಯುಯೇಷನ್ ಸರಿಯಿಲ್ಲವೆಂದು ನಮಗೆ ಅನ್ನಿಸಿದರೆ, ನಾವು ಕೋರ್ಟ್‌ಗೆ ಹೋಗಿ ಅಪೀಲ್ ಹಾಕುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ. ಅದನ್ನು ಸರ್ಕಾರ ಕೊಡಬೇಕಾಗುತ್ತದೆ. ಏಕೆಂದರೆ, ಎಲ್ಲಾ ಕಡೆ ಅಪೀಲ್ ಮಾಡತಕ್ಕಂಥದ್ದಕ್ಕೆ ಅವಕಾಶವಿದೆ. ಯಾವಾಗ ಒಂದು ವಸ್ತುವಿನ ಬೆಲೆ ಕಡಿಮೆ ಎಂದು ಕಂಡುಬಂದಾಗ ಅಥವಾ ನನಗೆ ಅನ್ಯಾಯವಾಗಿದೆ ಎಂದು ಕಂಡುಬಂದಾಗ, ಆತ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದರೆ ಅದು ಸರಿಯಲ್ಲ. ಇವತ್ತು ಅವರು ಲ್ಯಾಂಡ್ ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಹೇಳುತ್ತಿಲ್ಲ, ಅವರು ಆಸ್ತಿಯ ವ್ಯಾಲ್ಯೂ ಬಗ್ಗೆ ಮಾತ್ರ ಹೇಳುತ್ತಿದ್ದಾರೆ. ಏಕೆಂದರೆ ಅವರು ಇವತ್ತು ಸಾಗವಾನಿ ಮರವನ್ನು ಹಾಕಿಕೊಂಡು ಮನೆಗೆ ಜಂತಿಯನ್ನು ಹಾಕಿಕೊಂಡಿದ್ದಾರೆ, ಅಲ್ಲಿನ ಅಧಿಕಾರಿಗಳು ಇದು ಬೇವಿನ ಮರ ಅಥವಾ ಮಾವಿನ ಮರ ಎಂದು ಬರೆದು ಅವರಿಗೆ ಲಾಸ್ ಮಾಡುತ್ತಿದ್ದಾರೆ. ಆದರೆ ಇದರಲ್ಲಿ ಕೆಲವರು ದುರುಪಯೋಗವನ್ನು ಮಾಡಿಕೊಂಡಿದ್ದಾರೆ, ಅದನ್ನು ಇಲ್ಲವೆಂದು ಹೇಳುತ್ತಿಲ್ಲ. ಆದರೆ 100ಕ್ಕೆ 90ರಷ್ಟು ಜನ ಬಹಳ ಗೌರವದಿಂದ ತಮ್ಮ ಅನಿಸಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಅದರಲ್ಲಿ ಕೆಲವು ಮಧ್ಯವರ್ತಿಗಳು ಬಂದು ಬೇರೆ ಬೇರೆ ರೀತಿಯಲ್ಲಿ ಹೇಳತಕ್ಕಂಥದ್ದು ಇರಬಹುದು. ಈ ರೀತಿಯ ಮಧ್ಯವರ್ತಿಗಳು ಒಂದರೆಡು ಪರ್ಸೆಂಟ್ ಇರಬಹುದು. ಆದರೆ ಇದರಲ್ಲಿ ಜೆನಿಯನ್ ರೈತರು ಇವತ್ತಿನದಿವಸ ತೊಂದರೆಗೆ ಈಡಾಗಿದ್ದಾರೆ. ಆದ್ದರಿಂದ ಸರಕಾರ, ದಯವಿಟ್ಟು ಅವರಿಗೆ ಕೋರ್ಟ್‌ಗೆ ಅಪೀಲ್ ಹೋಗುವುದಕ್ಕೆ ಪ್ರಾವಿಜನ್ ಮಾಡಿಕೊಡಬೇಕು. ಕಬ್ಬು ಬೆಳೆಯತಕ್ಕಂಥ ಪ್ರದೇಶಗಳ ಜಮೀನಿಗೆ ಒಂದು ಲಕ್ಷದ 25 ಸಾವಿರ ಪರಿಹಾರಧನವನ್ನು ಕೊಡಬೇಕೆಂದು ಅವರ ಬೇಡಿಕೆ ಇದೆ, ಅದನ್ನು ಒಪ್ಪಿಕೊಳ್ಳಿ. ಸರ್ಕಾರ ಹಿಂದೆ ಡ್ರೈ ಲ್ಯಾಂಡ್‌ಗೆ 54 ಸಾವಿರ ಮತ್ತು 90 ಸಾವಿರ ಇರಿಗೇಷನ್ ಲ್ಯಾಂಡ್‌ಗೆ ಕೊಡುತ್ತಿದ್ದೀರಿ, ಆದರೆ ಹೆಚ್ಚು ಇರಿಗೇಷನ್ ಲ್ಯಾಂಡ್ ಇರತಕ್ಕಂಥದ್ದಕ್ಕೆ ಸ್ವಲ್ಪವಾದರೂ ಡಿಫರೆನ್ಸ್ ಮಾಡಲೇಬೇಕಾಗುತ್ತದೆ. ದಯವಿಟ್ಟು ಇದನ್ನು ಒಪ್ಪಿಕೊಂಡರೆ ಅಲ್ಲಿ ಕುಳಿತುಕೊಂಡಿರತಕ್ಕಂಥ ಜನಕ್ಕೆ ನ್ಯಾಯ ದೊರಕಿಸಿ ಕೊಟ್ಟಂತೆ ಆಗುತ್ತದೆ. ಅಲ್ಲಿ ಸತ್ಯಾಗ್ರಹ ಮಾಡುತ್ತಿರುವವರು ರಾಜ್ಯದ ಶಾಸಕರು ಮತ್ತು ಪಾರ್ಲಿಮೆಂಟ್ ಸದಸ್ಯರ ಹೆಸರನ್ನು ಹೇಳುತ್ತೇನೆ. ಆ ಭಾಗದ ಲೋಕಸಭೆ ಸದಸ್ಯರಾದ ಮಾನ್ಯ ರಮೇಶ್ ಜಿಗಜಿಣಗಿ ಮತ್ತು ಅಜಯ್ ಕುಮಾರ್ ಸರ್‌ನಾಯಕ್‌ರವರು ಇದ್ದಾರೆ ಮತ್ತು ಬಿಜಾಪುರದ ಮಾನ್ಯ ಎಂ.ಬಿ. ಪಾಟೀಲ್‌ರವರು ಮತ್ತು ಎಸ್.ಆರ್. ಪಾಟೀಲ್, ಎ.ಕೆ. ಕಟ್ಟಿಮುನಿ, ಎಸ್. ಜಿದ್ದಿ, ಬಿ.ಆರ್ ಪಾಟೀಲ್, ಚಿಮ್ಮಣಕಟ್ಟಿ ಮತ್ತು ನಾಡಗೌಡರು, ರಾಜಶೇಖರ್ ಶೀಲವಂತ, ಲಿಂಗಸೂರು ಮತ್ತು ಬಸವರಾಜ್ ಪಾಟೀಲ್, ಜಿ. ಟಿ. ಪಾಟೀಲ್, ಬಿ. ಎಸ್. ಪಾಟೀಲ್ ಮನಗೋಳಿ ಆಮೇಲೆ ಶ್ರೀಮತಿ ಜಯಲಕ್ಷ್ಮಿ ಪಾಟೀಲ್ ಮತ್ತು ಇ ್ನೂ ಅನೇಕ ಜನ ಉಪವಾಸ ಸತ್ಯಾಗ್ರಹವನ್ನು ಸರದಿ ಪ್ರಕಾರ ಮಾಡುತ್ತಿದ್ದಾರೆ. ಇದರಿಂದ ಮುಖ್ಯವಾಗಿ ಏನಾಗುತ್ತದೆಂದರೆ, ಅಲ್ಲಿರತಕ್ಕಂಥ ಶಾಂತಿಭಂಗ ಆದರೆ ಕೊನೆಗೆ ಒಂದು ಹೋಗಿ ಇನ್ನೊಂದು ಆಗ ್ತದೆ. ಸರ್ಕಾರ ಯಾವುದನ್ನು ಒಪ್ಪಿಕೊಂಡು ಕೊಡತಕ್ಕಂಥ ಈ ಹಂತದಲ್ಲಿ, ಪುನಃ ನೀವು ಸಂಶಯ ಸ್ಪದ ಇದೆ ಎಂದು ತಿಳಿದುಕೊಂಡು ಮತ್ತೆ ಪರಿಶೀಲನೆ

ಮಾಡತಕ್ಕಂಥದ್ದನ್ನು ಮಾಡಿ ಈಗ ಕೊಡತಕ್ಕಂಥ ಪರಿಹಾರಧನವನ್ನು ನಿಲ್ಲಿಸಿದರೆ ಅದು ಬಹಳ ತೊಂದರೆಯಾಗುತ್ತದೆ.

ಅಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಕ್ರಿಯೇಟ್ ಆಗುತ್ತದೆ. ಪ್ರಾಜೆಕ್ಟ್‌ಗೆ ಧಕ್ಕೆಯಾಗುತ್ತದೆ. ನಡೆಯತಕ್ಕಂಥ ಪ್ರಾಜೆಕ್ಟ್ ಕೂಡ ನಿಂತು ಹೋಗುತ್ತದೆ. ನೀವು ಹಣವನ್ನು ಖರ್ಚುಮಾಡಿಲ್ಲವೆಂದು ಕೊನೆಗೆ ಹೇಳಿಕೊಂಡು ಕೆಲಸವನ್ನು ನಿಲ್ಲಿಸತಕ್ಕಂಥ ಸಾಧ್ಯತೆ ಇದೆ. 2000 ಇಸ್ವಿಯೊಳಗೆ ಆ ಒಂದು ಪ್ರಾಜೆಕ್ಟ್ ಮುಗಿಸುತ್ತೇವೆ ಎನ್ನುವ ಪಣವನ್ನು ನೀವು ತೊಟ್ಟಿದ್ದೀರೆಂದು ಹೇಳುತ್ತೀರಿ. ಕೊನೆಯ ಪಕ್ಷ ಅದು ಮುಕ್ತಾಯವಾಗದಿದ್ದರೂ ಕೂಡ ಒಂದು ಸೇಫರ್ ಸೈಡ್‌ಗೆ ತರತಕ್ಕಂಥ ವ್ಯವಸ್ಥೆಯಾದರೂ ತಾವು ಮಾಡಬೇಕು. ಅದನ್ನು ಮಾಡಬೇಕಾದರೆ ಆ ಕಂಡೀಷನ್‌ಗಳನ್ನು ತಾವು ಒಪ್ಪಿಕೊಳ್ಳಬೇಕು. ಯಾವುದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಅಂಥದ್ದನ್ನು ನಾವು ಹೇಳಿಕೊಳ್ಳುತ್ತೇವೆ. ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ. ಯಾವುದೇ ಪ್ರಾಜೆಕ್ಟ್‌ನಲ್ಲಿ ಇಂತಹದ್ದನ್ನು ಮಾಡಿಲ್ಲ ಅದು ಕೊಡುವುದಕ್ಕೆ ಬರುವುದಿಲ್ಲ ಇದು ಹೂಮನಿ ಇಂಪಾಸಿಬಲ್ ಎಂದು ಇದ್ದರೆ ನಾವೂ ಕೂಡ ಕೇಳುವುದಿಲ್ಲ. ಯಾವುದು ಸಾಧ್ಯತೆ ಇದೆ, ಯಾವುದನ್ನು ನೀವು ಆ ಕಾಲದಲ್ಲಿ ಮಾಡಬಹುದು. ಮಾರ್ಕೆಟ್ ವಾಲ್ಯೂ ಪ್ರಕಾರ ನೀವು ಕೊಟ್ಟುಬಿಡಿ. ತಮಗೆ ಗೊತ್ತಿದೆ. ನೈಸರ್ಗಿಕ ವಿಕೋಪದಲ್ಲಿ ಜೀವನವನ್ನು ಕಳೆದುಕೊಂಡವರಿಗೆ ನಾವೇ ಒಂದು ಲಕ್ಷ ರೂಪಾಯಿಗಳ ಪರಿಹಾರ ಹಣವನ್ನು ಕೊಡಬೇಕೆಂದು ಹೇಳುತ್ತೇವೆ. ಇಲ್ಲಿ ಅನೇಕ ಜನರು ಆಸ್ತಿಯನ್ನು ಕಳೆದುಕೊಂಡು, ಮನೆ ಕಳೆದುಕೊಂಡು ಅವರು ಬೇರೆ ಊರಿಗೆ ಇವತ್ತು ಶಿಫ್ಟ್ ಆಗಬೇಕಾದರೆ ಅವರಿಗೆ ಎಷ್ಟು ಕಷ್ಟವಾಗುತ್ತದೆ. ಯಾವ ಊರಿನಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇರುವುದಿಲ್ಲ. ಶಾಲೆ, ರಸ್ತೆ ಸೌಕರ್ಯ, ದೇವಸ್ಥಾನಗಳು ಇರುವುದಿಲ್ಲ. ಅಲ್ಲಿ ಕಮ್ಯುನಿಟಿ ಹಾಲ್, ದವಾಖಾನೆಗಳು ಇರುವುದಿಲ್ಲ. ಅಂತಹ ಕಡೆ ಹೋಗಿ ಅವರು ವಾಸ ಮಾಡಲಿ ಎಂದರೆ ಅದು ಅವರಿಗೆ ವನವಾಸವೇ. ಕನಿಷ್ಟ ಪಕ್ಷ ಇವತ್ತು ಅವರ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಂಡು, ಅವರ ಪರಿಸ್ಥಿತಿಯ ಬಗ್ಗೆ ಮಾನ್ಯ ನಾಗೇಗೌಡರು ಗಮನವನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಷಯವೇನೆಂದರೆ, ಪ್ರೈಸ್ ಫಿಕ್ಸೇಷನ್ ಕಮಿಟಿ ಎಂದು ಇವತ್ತು, ಅದಕ್ಕೆ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದರು. ಅದಕ್ಕೆ ವಿಭಾಗಾಧಿಕಾರಿಗಳು ಏನು ಮಾಡುತ್ತಿದ್ದರೆಂದರೆ ಬೆಲೆ ನಿಗದಿ ಮಾಡುವ ಸಲಹಾ ಸಮಿತಿ ಎಂದು ಇತ್ತು. ಅದಕ್ಕೆ ವಿಭಾಗಾಧಿಕಾರಿಗಳು ಅಧ್ಯಕ್ಷರು. ಸದಸ್ಯರು ಏನು ಇದ್ದರು, ಅವರು ಚುನಾಯಿತ ಪ್ರತಿನಿಧಿಗಳು. ಶಾಸಕರನ್ನು ಮತ್ತು ಲೋಕಸಭಾ ಸದಸ್ಯರನ್ನು ಕರೆದು ಆ ಭಾಗದಲ್ಲಿ ಮನೆ ಬೆಲೆ ಏನು ಇದೆ? ಅವರು ಕಟ್ಟಡಗಳನ್ನು ಕಟ್ಟಲು ಸಾಮಾನುಗಳನ್ನು ಎಲ್ಲಿಂದ ತರುತ್ತಾರೆ, ಆಮೇಲೆ ಅವರು ಯಾವ ವಸ್ತುಗಳನ್ನು ಉಪಯೋಗ ಮಾಡುತ್ತಾರೆ. ಆ ವಿಚಾರವಾಗಿ ಎಲ್ಲವನ್ನೂ ತಿಳಿದುಕೊಂಡು ಚುನಾಯಿತ ಪ್ರತಿನಿಧಿಗಳು ಮತ್ತು ವಿಭಾಗಾಧಿಕಾರಿಗಳು ಸೇರಿ ಪ್ರೈಸ್ ಫಿಕ್ಸ್ ಮಾಡಿ ಅವರು ಪರಿಹಾರವನ್ನು ಕೊಡುವುದಕ್ಕೆ ಶಿಫಾರಸ್ಸು ಮಾಡುತ್ತಿದ್ದರು. ಪ್ರೈಸ್ ಫಿಕ್ಸೇಷನ್ ಕಮಿಟಿ ಇವತ್ತು ತೆಗೆದು ಹಾಕಿದ್ದಾರೆ. ನಾಗೇಗೌಡರೇ, ತಾವು ಕುಳಿತುಕೊಂಡು ಕೇಳಿದರೆ ನಾವು ಏನಾದರೂ ಹೇಳಬಹುದು...

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಕರ್ ಎಂ. ಮಾಮನಿಯವರು) ಪೀಠವನ್ನು ಅಲಂಕರಿಸಿದರು.)

ಆಮೇಲೆ ಬಾಗಲಕೋಟೆಗೆ ಹೋಗಿ ಎಸ್.ಎಸ್. ಪಾಟೀಲರು ಏನು ಹೇಳಿ ಬಂದಿದ್ದಾರೋ ಗೊತ್ತಿಲ್ಲ. ಇವತ್ತು ಏನಾಗಿದೆ, ಅಲ್ಲಿ ಏನು ಪ್ರೈಸ್ ಫಿಕ್ಸೇಷನ್ ಕಮಿಟಿ ಆಗಿತ್ತು ಆ ಪ್ರೈಸ್ ಫಿಕ್ಸೇಷನ್ ಕಮಿಟಿ ಇವತ್ತು ರದ್ದು ಮಾಡಿದ್ದಾರೆ. ಆದರಿಂದ ಏನಾಗಿದೆ ಹಾರ್ಟ್ ಬರ್ನಿಂಗ್ ಪ್ರಾರಂಭವಾಗಿದೆ. ಆ ಪ್ರೈಸ್ ಫಿಕ್ಸೇಷನ್ ಕಮಿಟಿಯಲ್ಲಿ, ಶಾಸಕರು, ಲೋಕಸಭಾ ಸದಸ್ಯರುಗಳಿಗೆ ಕರೆಯಿಸಿ ಅವರನ್ನು ಕನ್‌ಸಲ್ಟ್ ಮಾಡಿ ಮನೆ ಬೆಲೆ ಎಷ್ಟು ಇದೆ? ಎನ್ನುವುದನ್ನು ನಿಗದಿ ಮಾಡತಕ್ಕಂಥದ್ದನ್ನು ವಿಭಾಗಾಧಿಕಾರಿಗಳು ಮಾಡುತ್ತಿದ್ದರು. ಈಗ ಅದನ್ನು ತೆಗೆದು ಹಾಕಿದ ಮೇಲೆ ಕೆಳಗಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಜಾಮದಾರ ಇರಬಹುದು, ಕಂದಾಯ ಕಾರ್ಯದರ್ಶಿಗಳು ಇರಬಹುದು ಇವರನ್ನು ಬಿಟ್ಟು ಕೆಳಗಿನ ಅಧಿಕಾರಿಗಳು..... ಅಲ್ಲಿ ಲೋಕಲ್ ಇರತಕ್ಕಂಥ, ಉಪ ವಿಭಾಗಾಧಿಕಾರಿಗಳು, ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಏನು ಇರುತ್ತಾರೆ ಅವರು ಏನು ರೇಟ್ ಫಿಕ್ಸ್ ಮಾಡುತ್ತಾರೆ ಎಂಬುದು ನಿಮಗೆ ಗೊತ್ತಿದೆ. ಎಷ್ಟರಮಟ್ಟಿಗೆ ಆ ಕೆಳಮಟ್ಟದ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಧಕ್ಷತೆಯಿಂದ ಕೆಲಸ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಎಲ್ಲರೂ ಹಾಗೆಯೇ ಇದ್ದಾರೆಂದು ನಾನು ಹೇಳುವುದಿಲ್ಲ. ಇವತ್ತಿನ ದಿವಸದಲ್ಲಿ ನೂರಕ್ಕೆ ಎಂಭತ್ತು ಭಾಗ ಹದಗೆಟ್ಟು ಹೋಗಿದೆ. ಆ ಫಲಾನುಭವಿಗಳು ಲ್ಯಾಂಡ್ ಲೂಸರ್ಸ್ ಸ್ವತಃ ಹೋಗಿ ಅವರನ್ನು ಕೇಳಿಕೊಂಡು ಆ ಅಧಿಕಾರಿಗಳ ಕೈಕಾಲು ಹಿಡಿದುಕೊಂಡು ಅವರು ಹಣವನ್ನು ಕೊಟ್ಟರೆ ಆಗ ಮಾತ್ರ ಅವರಿಗೆ ನ್ಯಾಯ ಸಿಗತಕ್ಕಂಥ ಸಾಧ್ಯತೆ ಇದೆ. ರೆಕ್ಮೆಂಡ್ ಇದ್ದವರು ಮಾಡಿಕೊಳ್ಳುತ್ತಾರೆ ಅದು ಬೇರೆ. ದಯಮಾಡಿ ಇದನ್ನು ಬೇರೆಯವರು ಎಕ್ಸ್‌ಪ್ಲಾಯಿಟ್ ಮಾಡಿಕೊಳ್ಳಬಾರದು. ಇದನನು ಕೆಲವು ಜನರು ಕಾದು ನೋಡುತ್ತಿರುತ್ತಾರೆ. ಒಂದು ಕಮಿಟಿ ಮಾಡಿದ್ದು, ಏನಾದರೂ ಮಾಡಿ ಎಕ್ಸ್‌ಪ್ಲಾಯಿಟ್ ಮಾಡಬೇಕೆನ್ನುವ ಜನ ಕೂಡ ಇದ್ದಾರೆ. ಅದಕ್ಕೆ ದಯಮಾಡಿ ಸರ್ಕಾರ ಸಿಚ್ಯುಯೇಷನ್ ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು, ಮತ್ತು ಯಾವ ಜನ ನೊಂದಿದ್ದಾರೆ, ಯಾರಿಗೆ ಇವತ್ತು ಆ ಪರಿಹಾರಧನ ಸಿಕ್ಕಿಲ್ಲ, ಅಂತಹವರಿಗೆ ನೀವು ಸಹಾಯ ಮಾಡತಕ್ಕಂಥದ್ದನ್ನು ಮಾಡಬೇಕು. ಈಗಾಗಲೇ ಸಾಕಷ್ಟು ಸ್ಟೆಪ್ಸ್ ತೆಗೆದುಕೊಂಡಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ಇದೇ ಸದನದಲ್ಲಿ ನಮ್ಮ ಬಿ. ಎಸ್. ಪಾಟೀಲ್ ಮನಗೂಳಿ, ಜೆ.ಟಿ. ಪಾಟೀಲ, ಕಲ್ಲೂತಿ ಕಾಶಪ್ಪನವರ ಎಲ್ಲರೂ ಕೂಡ ಇಲ್ಲಿ ಬಂದು ಧರಣಿ ಮಾಡುವಾಗ ನೀವು ಒಪ್ಪಿಕೊಂಡಿದ್ದೀರಿ. ಒಪ್ಪಿಕೊಂಡು ಕೆಲವನ್ನು ಸರಳಗೊಳಿಸಿದಿರಿ, ಆದರೆ ಪುನಃ ಸರಳಗೊಳಿಸಿದ ಅನೇಕ ಅಂಶಗಳನ್ನು ಬಿಗಿ ಮಾಡತಕ್ಕಂಥ ಪ್ರಯತ್ನವನ್ನು ಇವತ್ತು ಜಾಮದಾರವರು ಮತ್ತು ಅವರ ಅಧಿಕಾರಿಗಳು ಅಲ್ಲಿ ಮಾಡಿದ್ದಾರೆ. ಅದರಿಂದ ತೊಂದರೆ ಬಂದು, ಜನ ರೊಚ್ಚಿಗೆದ್ದು ಇವತ್ತು ಸತ್ಯಾಗ್ರಹ ಮಾಡುತ್ತಿದ್ದಾರೆ. ಅದಕ್ಕಾಗಿ ದಯಮಾಡಿ ಅವರಿಗೆ ಸಿಗತಕ್ಕಂಥ ಸೌಲಭ್ಯಗಳನ್ನು ಕೊಟ್ಟುಬಿಡಿ. ಡಿಪ್ರೀಸಿಯೇಷನ್ ಬಗ್ಗೆ ಇದ್ದರೂ ಕೂಡ ನೀವು ಆ ಡಿಪ್ರೀಸಿಯೇಷನ್ ಕಟ್ ಮಾಡದೆ ಇದ್ದರೂ ಅವರಿಗೆ ಅಪೀಲು ಹೋಗಲಿಕ್ಕೆ ನೀವು ಅನುಕೂಲ ಮಾಡಿಕೊಡಿ. ಹೆವಿ ಇರಿಗೇಷನ್ ಇದ್ದವರಿಗೆ 1.25 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತಮಗೂ ಕೂಡ ಮನವರಿಕೆಯಾಗಿದೆ. ತಾವು ಸಹಾಯವನ್ನು

ಮಾಡತಕ್ಕಂಥದ್ದನ್ನು ಮಾಡಬೇಕು. ಉಳಿದ ಜಮೀನಿಗೆ50 ಸಾವಿರ ಮತ್ತು90 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆ ಹಣ ಕೂಡ ಬೇಗನೆ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ದಯಮಾಡಿ ಈ ಕೆಲಸವನ್ನು ಅವರು ಬೇಗನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಯಾರು ಸತ್ಯಾಗ್ರಹ ಕುಳಿತಿದ್ದಾರೆ, ಅವರಿಗೆ ತಾವು ಇವತ್ತು ಒಂದು ಆಶ್ವಾಸನೆಯನ್ನು ಕೊಟ್ಟು ಸತ್ಯಾಗ್ರಹವನ್ನು ಕೈ ಬಿಡುವ ವ್ಯವಸ್ಥೆ ಮಾಡಬೇಕು. ಈ ಎಜಿಟೇಷನನ್ನು ಮುಂದುವರಿಸುವುದನ್ನು ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ನಾವು ಕೂಡ ಸತ್ಯಾಗ್ರಹಕ್ಕೆ ಬೆಂಬಲ ಮಾಡಬೇಕಾಗುತ್ತದೆ, ಆಗ ಅದಕ್ಕೆ ರಾಜಕೀಯ ಬೆಂಬಲ ಸಿಗುತ್ತದೆ. ಅದಕ್ಕೆ ರಾಜಕೀಯ ಬಣ್ಣ ಬರುತ್ತದೆ. ಆ ರಾಜಕೀಯ ಬಣ್ಣ ಕೊಡುವುದಕ್ಕೆ ನಾವು ಯಾರೂ ಹೋಗಬಾರದು. ನ್ಯಾಯವಾದ ಬೇಡಿಕೆಗಳನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಮತ್ತು ಅವರ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ. ಬಹುಶಃ ಅವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಆ ಮುಳಗಡೆ ಕ್ಷೇತ್ರದ ಶಾಸಕನಾಗಿದ್ದೇನೆ. ನನ್ನ ಕ್ಷೇತ್ರದಲ್ಲಿ ಸಾಕಷ್ಟು ಪ್ರದೇಶ ಮುಳಗಡೆಯಾಗಿದೆ. ಇದರ ಬಗ್ಗೆ ನಾನು ಒಂದು ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಕೇಳಿಕೊಂಡಿದ್ದೆ.

ಉಪಾಧ್ಯಕ್ಷರು : ತಾವು ನಂತರ ಮಾತನಾಡಿ, ಮೊದಲು ನಂಜೇಗೌಡರು ಮಾತನಾಡಲಿ. ತಮಗೆ ಮಾತನಾಡಲು ನಾನು ಅವಕಾಶ ಮಾಡಿಕೊಡುತ್ತೇನೆ.

+ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಈ ಯು.ಕೆ.ಪಿ. ಪುನರ್ ವಿಮರ್ಶೆಯಾಗಿದ್ದು ನಾನು ಮಂತ್ರಿಯಾಗಿದ್ದಾಗ, ಅದು ಇನ್ನೂ ಅಡಿಪಾಯದ ಹಂತದಲ್ಲಿ ಇತ್ತು. ಆ ಅಚ್ಚುಕಟ್ಟನ್ನು ಜಾಸ್ತಿ ಮಾಡಿದ್ದೇವೆ. ಅಲ್ಲಿ ಮುಳುಗಡೆಯಾಗುವುದು ಮೂರೂವರೆ ಲಕ್ಷ ಎಕರೆ ಜಮೀನು. ಈ ರಾಷ್ಟ್ರದಲ್ಲಿ ಎಲ್ಲೂ ಇಷ್ಟು ಬೃಹತ್ ಆದ ಪ್ರದೇಶ ಮುಳುಗಡೆಯಾಗಿಲ್ಲ. ಕೆಲವು ನೀರಾವರಿ ಡ್ಯಾಮ್‌ಗಳಲ್ಲಿ ಮೂರೂವರೆ ಲಕ್ಷ ಎಕರೆ ನಮಗೆ ನೀರಾವರಿ ಮಾಡುವುದಕ್ಕಾಗಿಲ್ಲ. ಅಷ್ಟು ಪ್ರದೇಶವನ್ನು ನಾವು ಮುಳುಗಡೆ ಇವತ್ತು ಮಾಡಿದ್ದೇವೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ಆ ಪರಿಸ್ಥಿತಿ ಗೊತ್ತಾಗುತ್ತದೆ. ಹೇಮಾವತಿಯಲ್ಲಿ ಮುಳುಗಡೆಯಾಯಿತು, ಹಾರಂಗಿಯಲ್ಲಿ ಮುಳುಗಡೆಯಾಯಿತು. ಅವರು ಅಲ್ಲಿ ತಲೆತಲಾಂತರಗಳಿಂದ ವಾಸವಾಗಿ ಇದ್ದರು. ಆ ಸ್ಥಳ ಬಿಟ್ಟು ಹೋಗಬೇಕಾದರೆ ಅವರ ನೋವು ಯಾವರೀತಿ ಇರುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು, ಸರ್ಕಾರ ಅರ್ಥಮಾಡಿಕೊಂಡಿಲ್ಲವೆಂದು ನಾನು ಹೇಳುವುದಿಲ್ಲ, ಅರ್ಥಮಾಡಿಕೊಂಡಿದೆ. ನಾನು ನಮ್ಮ ಯುವಕ ಮಿತ್ರರ ಜೊತೆ ಕುಳಿತುಕೊಂಡು ಲೆಕ್ಕ ಹಾಕಿದೆ. ಡಿಪ್ರೀಸಿಯೇಷನ್ ಸಲುವಾಗಿ ಕೋರ್ಟಿಗೆ ಹೋಗುವುದು ಯಾವ ರೀತಿ ಎಂದು, ಅವರು ಹೇಳುವ ಪ್ರಕಾರ ಒಂದು ಲೆಕ್ಕ ಹಾಕಿಕೊಳ್ಳೋಣ. ಒಂದು ಮನೆಗೆ ಒಂದು ಲಕ್ಷ ರೂಪಾಯಿಗಳೆಂದು ಇಟ್ಟುಕೊಳ್ಳೋಣ. ನೀವು ಡಿಪ್ರೀಸಿಯೇಷನ್ 25 ಸಾವಿರ ರೂಪಾಯಿಗಳನ್ನು ಕಳೆದರೆ ಅಲ್ಲಿಗೆ 75

ಸಾವಿರ ರೂಪಾಯಿಗಳು ಮಾತ್ರ ಉಳಿಯಿತು. ಪರಿಹಾರಧನ ಎಂದು ಅವರಿಗೆ ಕೊಡುತ್ತೀರಿ, ತಬ್ಬಲಿಗಳಾಗಿ ದಿಕ್ಕೆಟ್ಟು ಹೋಗುತ್ತಾರೆಂದು, ಅದಕ್ಕಾಗಿ 22,500 ರೂ ಕೊಡುತ್ತೀರಿ. ಒಟ್ಟು 33 ಪರ್ಸೆಂಟ್ ಆದರೆ 98 ಸಾವಿರ ರೂಪಾಯಿಗಳಾಯಿತು. 12 ಪರ್ಸೆಂಟ್ ಹಣವನ್ನು ಇಂಟ್ರೆಸ್ಟ್‌ಗಾಗಿ ಪರಿಹಾರ ಕೊಡುತ್ತೀರಿ. ಇದು ಎಲ್ಲಾ ಸೇರಿಸಿ ಅಂದಾಜು ಒಂದು ಲಕ್ಷ ಎಂಟು ಸಾವಿರ ರೂಪಾಯಿಗಳಾಗುತ್ತದೆ. ಅವರು ಕೋರ್ಟಿಗೆ ಹೋದರೆ 50 ಪರ್ಸೆಂಟ್ ಪರಿಹಾರ ಹೆಚ್ಚು ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಅದು ಆದರೆ ಒಂದು ಲಕ್ಷ 46 ಸಾವಿರ ರೂಪಾಯಿಗಳಾಯಿತು. ಈಗ ನೀವು ಡಿಪ್ರೀಸಿಯೇಷನ್ ತೆಗೆದು ಹಾಕಿದರೆ ಏನಾಗುತ್ತದೆ. ಒಂದು ಲಕ್ಷ ರೂಪಾಯಿಗಳು ಉಳಿದುಕೊಳ್ಳುತ್ತದೆ. ಪರಿಹಾರಧನ 33 ಪರ್ಸೆಂಟ್ ಅದು ಇರುತ್ತದೆ. 12 ಪರ್ಸೆಂಟ್ ಇಂಟ್ರೆಸ್ಟ್ ಇದೆ. ತಾವು ಅದನ್ನೂ ಕೊಡಬೇಕಾಗುತ್ತದೆ, ಇದನ್ನು ನಾನು ಹೇಳತಕ್ಕಂಥದ್ದು ಮಾನವೀಯತೆಯ ದೃಷ್ಟಿಯಿಂದ, ನೀವು ಕೊಡಬೇಕಾಗುತ್ತದೆ. ಈ ಲೆಕ್ಕ ಹಾಕಿಕೊಂಡರೆ ಇಂಟ್ರೆಸ್ಟ್ ಸೇರಿಸಿಕೊಂಡು ಇಲ್ಲಾ ನೀವು ಇಂಟ್ರೆಸ್ ಬಿಟ್ಟರೆ ನಿಮಗೂ ಅವರಿಗೂ 18 ಸಾವಿರ ರೂಪಾಯಿಗಳ ವ್ಯತ್ಯಾಸ ಬರುತ್ತದೆ.

ಅವರು ಕೋರ್ಟ್ ಮೆಟ್ಟಿಲನ್ನು ಹತ್ತುವುದು ಬೇಡ. ಈ 18 ಸಾವಿರ ವ್ಯತ್ಯಾಸವನ್ನು ಇಡಬೇಡಿ ಒಂದು ವಯೋಮೀಡಿಯಾ ಮಾಡಿ ಅವರು ಕೋರ್ಟಿಗೆ ಹೋದರೆ ಡಿಲೇ ಆಗುತ್ತದೆ ನಾನು ಕೋರ್ಟಿನ ವ್ಯವಹಾರವನ್ನು ನೋಡಿದ್ದೇನೆ. ಅವರು ತೆಗೆದುಕೊಳ್ಳುವ ಪರಿಹಾರವು ಲಾಯರ್‌ಗಳಿಗೇ ಖರ್ಚಾಗುತ್ತದೆ. ಇದು ನಮಗೆ ನಿಮಗೆಲ್ಲರಿಗೂ ಗೊತ್ತಿದೆ. ನಮ್ಮಲ್ಲಿ ಏನಾಯಿತು ಎಂದರೆ ಲಾಯರ್ಸ್‌ಗಳು ಚೆಕನ್ನು ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಪವರ್ ಆಫ್ ಆಟಾರ್ನಿಯನ್ನು ತೆಗೆದುಕೊಂಡಿದ್ದರು. ಕೋರ್ಟ್‌ಗೆ ಹೋಗುವುದು ಬೇಡ, ಮುಳುಗಡೆಯಾದವರಿಗೆ ಪರಿಹಾರವನ್ನು ನಿರಾಳವಾಗಿ ಕೊಡೋಣ. ಆ ಮೇಲೆ ಬೆಳೆ ಕಾಂಪನ್‌ಸೇಷನನ್ನು ಕೊಡುತ್ತಾರೆ. ತೆಂಗಿನ ಬೆಳೆ ಇದ್ದರೆ ಮರಗಳನ್ನು ಎಣಿಸಿ ಕಾಂಪನ್‌ಸೇಷನನ್ನು ಕೊಡುತ್ತಾರೆ. ಅಡಿಕೆ ಮರ ಇದ್ದರೆ ಮರ ಎಣಿಸಿ ಕಾಂಪನ್‌ಸೇಷನ್‌ನನ್ನು ಕೊಡುತ್ತಾರೆ. ಹಾರ್ಟಿಕಲ್ಚರ್ ಇದ್ದರೆ ಅದನ್ನು ಎಣಿಸಿ ಕ್ರಾಫ್‌ಗೆ ಕಾಂಪನ್ಸ್‌ನೇಷನ್ಸ್ ಕೊಡುತ್ತಾರೆ. ಕಬ್ಬು ಇದರೆ ಕಬ್ಬನ್ನು ಡ್ರೈ ಎಂದು ಟ್ರೀಟ್ ಮಾಡುವುದಕ್ಕೆ ಬರುವುದಿಲ್ಲ. ಗದ್ದೆಗಿಂತ ಡಬ್ಬಲ್ ನೀರನ್ನು ಕುಡಿಯುತ್ತದೆ. ಅದನ್ನು ವೆಟ್ ಎಂದು ಟ್ರೀಟ್ ಮಾಡಬೇಕಾಗುತ್ತದೆ. ಇನ್ನು ಬೋಟ್‌ನಲ್ಲಿ ಹೋಗಿಬಿಟ್ಟು ಎಷ್ಟು ಮುಳುಗಡೆಯಾಯಿತು ಏನು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಹಾರ್ಟಿಕಲ್ಚರ್ ಮತ್ತು ಕಬ್ಬಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ. ಅವರಿಗೆಲ್ಲಾ ಸೈಟನ್ನು ಕೊಡಬೇಕು. ಈಗ ಏನೋ ಒಂದು ಪದ್ಧತಿಯನ್ನು ಇಟ್ಟುಕೊಂಡು ಸೈಟನ್ನು ಹಂಚಿಕೊಂಡು ಬರುತ್ತಿದ್ದಾರೆ, ಅದು ಸರಿಯಾಗಿದೆ ಎಂದು ಹೇಳುತ್ತಿದ್ದಾರೆ. ಹೆಚ್ಚು ಸೈಟನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆಯೇ ಹೊರತು ಮೆಥೆಡ್ ಸರಿಯಾಗಿಲ್ಲ ಎಂದು ಹೇಳುತ್ತಿಲ್ಲ. ಈಗ ಏನಾಗಿದೆ ಎಂದರೆ ಲಾಟ್ ಮುಖಾಂತರ ಸೈಟನ್ನು ಹಂಚುವುದಕ್ಕೆ ಹೊರಟ್ಟಿದ್ದಾರೆ. ಈಗ ಒಂದು ಕುಟುಂಬದಲ್ಲಿ 4-5 ಜನ ಒಟ್ಟಿಗೆ ಪಕ್ಕಪಕ್ಕದಲ್ಲಿರುತ್ತಾರೆ. ದೊಡ್ಡದಾದಂಥ ಕತೆಯಾಕೆ ಬೇಕು, ನೀವು ಲಾಟ್‌ನಲ್ಲಿ ಏಕೆ ಮಾಡುತ್ತೀರಿ ? ನೀವು ಲಾಟ್‌ನಲ್ಲಿ ಮಾಡಕೂಡದು, ಲಾಟ್‌ನಲ್ಲಿ ಕೊಡುವುದನ್ನು ತಪ್ಪಿಸಬೇಕು. ಲಾಟ್‌ನಲ್ಲಿ ಕೊಡುವುದು ಅಲ್ಲವೇ ಅಲ್ಲ. ಆಮೇಲೆ ಜಾಬ್ ಆಪರ್‌ಚ್ಯೂನಿಟಿ, ಇದನ್ನು ನಾವು ಪಾಲಿಸಿ ಮ್ಯಾಟರನ್ನಾಗಿ ಮಾಡಿಕೊಂಡು

ಬಿಡಬೇಕು. ಮಾನ್ಯ ನಾಣಯ್ಯನವರೇ, ಸ್ವಲ್ಪ ಈ ಕಡೆ ಕೇಳಿ ಮುಳುಗಡೆಯಾಗುವವರ ಸಂಕಟ ನಿಮಗೆ ಗೊತ್ತಿದೆ. ನಿಮ್ಮಲ್ಲೂ ಹಾರಂಗಿಯಲ್ಲಿ ಮುಳುಗಡೆಯಾಗಿದೆ, ಹೇಮಾವತಿಯಲ್ಲೂ ಕೊಡಗಿನ ಸ್ವಲ್ಪ ಭಾಗ ಮುಳುಗಡೆಯಾಗಿದೆ. ಜಾಬ್ ಆಪರ್‌ಚ್ಯೂನಿಟಿಯನ್ನು ನೀವು ಇಲ್ಲಿ ಕೊಡಬೇಕಾಗುತ್ತದೆ, ಇಂಜಿನಿಯರ್ಸ್ ಆಗಲಿ, ಮತ್ತೊಬ್ಬರಾಗಲಿ, ಕೊಡಲೇಬೇಕು. ಪ್ರೋರೇಟನ್ನು ಅಲ್ಲೇ ಇಟ್ಟುಕೊಂಡು ಮಾಡಿ. ಪ್ರೋರೇಟನ್ನು ಇಟ್ಟುಕೊಂಡು ಅದೇ ಪ್ರದೇಶದ ಜನರಿಗೆ ಮಾಡಿದರೆ ತಪ್ಪು ಏನಾಗುತ್ತದೆ. ಅವರು ಸ್ವಲ್ಪ ಕಳೆದುಕೊಂಡಿರುತ್ತಾರೆ, ಅದನ್ನು ತಾವು ಮಾಡಬೇಕು. ರಿಹ್ಯಾಬಿಲಿಟೇಷನ್ ವರ್ಕ್, ಇವರಿಗೆ ಕೊಡತಕ್ಕಂತಹ ಪರಿಹಾರವನ್ನು ಸರಿದೂಗಿಸಬೇಕು. ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಮುಳುಗಡೆಯಾಗಿದೆ. ಎಫ್‌ಆರ್‌ಎಲ್ 510ಕ್ಕೆ ಎಷ್ಟು ಆಗುತ್ತದೆ, 517ಕ್ಕೆ ಎಷ್ಟು ಆಗುತ್ತದೆ, 521 ಕ್ಕೆ ಎಷ್ಟು ಆಗುತ್ತದೆ, ಅಷ್ಟು ನೀರು ನಿಲ್ಲುವುದರೊಳಗೆ ಇವರನ್ನೆಲ್ಲಾ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ? ಕಾರ್ಯಕ್ರಮವೇನು? ಇದನ್ನು ಸ್ವಲ್ಪ ತಿಳಿಸಬೇಕೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ) : ಮಾನ್ಯ ಉಪಾಧ್ಯಕ್ಷರೇ, ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣಾ ಪ್ರಾಜೆಕ್ಟ್‌ನಿಂದ ಆ ಭಾಗದ ಜನರಿಗೆ ಬಹಳಷ್ಟು ತೊಂದರೆಯಾಗಿದೆ. ನೀರಾವರಿ ಸೌಲಭ್ಯವನ್ನು ಅತ್ಯಂತ ಕಡಿಮೆಯಾಗಿ ತೆಗೆದುಕೊಂಡರೂ ಕೂಡ, ಮಾನ್ಯ ನಂಜೇಗೌಡರು ಹೇಳಿದಹಾಗೇ ಅತಿ ಹೆಚ್ಚಿನ ಭಾಗವನ್ನು ಮುಳುಗಡೆಯಲ್ಲಿ ನಾವು ಕಳೆದುಕೊಂಡಿದ್ದೇವೆ. ಇಡೀ ದೇಶದಲ್ಲಿ ಯಾವುದೇ ಡ್ಯಾಂ ತೆಗೆದುಕೊಂಡರೂ ನಾವೇ ಅತಿ ಹೆಚ್ಚಿನ ಭಾಗವನ್ನು ಕಳೆದುಕೊಂಡಿದ್ದೇವೆ. ಈ ಕಾರಣಕ್ಕಾಗಿ ಈ ಭಾಗದ ಜನತೆ ನಿರಾಶ್ರಿತರಾಗಿ ಇವತ್ತಿನದಿವಸ ತಮ್ಮ ಮನೆಮಠಗಳನ್ನು ಕಳೆದುಕೊಂಡು ರಸ್ತೆಯ ಬದಿಗಿರುವಂತಹ ವ್ಯವಸ್ಥೆ ಇವತ್ತಿನ ದಿವಸ ಆಗಿದೆ. ಯಾರು 10 ರಿಂದ 20 ಎಕರೆ ಇದ್ದಂತವರು ಆಳುಕಾಳುಗಳನ್ನು ಸಾಕುತ್ತಿದ್ದಂಥವರು ಇವತ್ತಿನ ದಿವಸ ಮನೆಯನ್ನು ಕಳೆದುಕೊಂಡು ರಸ್ತೆಯ ಬದಿಯಲ್ಲಿರಬೇಕೆಂದರೆ ನಾವು ಸಹಿತ ಆ ಪರಿಸ್ಥಿತಿಯಲ್ಲಿದ್ದರೆ ಏನಾಗುತ್ತದೆ ಎಂಬ ಬಗ್ಗೆ ಸರ್ಕಾರ ಇವತ್ತಿನ ದಿವಸ ಗಂಭೀರವಾಗಿ ವಿಚಾರವನ್ನು ಮಾಡಬೇಕು. ಇಲ್ಲಿ ಆಗತಕ್ಕಂತಹ ಸಮಸ್ಯೆಯ ಬಗ್ಗೆ, ಮೊನ್ನೆ 15ನೇ ತಾರೀಖಿನ ದಿವಸ ಆ ಭಾಗದ ಎಲ್ಲಾ ಶಾಸಕರು, ಸಂಸದರು, ಪಕ್ಷಭೇದವನ್ನು ಮರೆತು ಒಗ್ಗಟ್ಟಾಗಿ ಧರಣಿಯನ್ನು ಮಾಡತಕ್ಕಂತಹ ಪ್ರಸಂಗ ಬಂತು. ಈ ಪ್ರಸಂಗ ಏತಕ್ಕೆ ಬಂತು ಎನ್ನುವುದರ ಬಗ್ಗೆ ಸ್ವಲ್ಪದರಲ್ಲೇ ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಹೋದ ವರ್ಷ ಏನು ಜಿಲ್ಲೆಗಳ ವಿಂಗಡಣೆಯಾಯಿತು, ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮಲ್ಲಿಗೆ ಬಂದಾಗ 25 ಪರ್ಸೆಂಟ್ ಡಿಪ್ರೀಸಿಯೇಷನನ್ನು ನಾವು ತೆಗೆದುಹಾಕುತ್ತೇವೆ, 25 ಎಕರೆಗಿಂತ ಹೆಚ್ಚಿನ ಭೂಮಿ ಇದ್ದವರಿಗೆ ಎಲ್ಲಾ ಸೌಲಭ್ಯವನ್ನು ನಾವು ಒದಗಿಸಿಕೊಡುತ್ತೇವೆಂದು ಅವರು ಅಲ್ಲಿ ತಿಳಿಸಿದ್ದರು. ಅದಕ್ಕಾಗಿ ಪಕ್ಷಾತೀತವಾಗಿ ಆ ಭಾಗದ ಎಲ್ಲಾ ಸಂಸದರು, ಶಾಸಕರು, ಅವರುಗಳಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಬೆಂಗಳೂರಿನವರೆಗೆ ಬಂದು ಸಹ ಅವರಿಗೆ ಸನ್ಮಾನಗಳನ್ನು ಮಾಡಿದ್ದೇವೆ. ಇದು ಸಾಮಾನ್ಯ ಜನತೆಗೆ ಸಹ ಗೊತ್ತಿದೆ. ಒಂದು ಒಂದೂವರೆಗೆ ತಿಂಗಳವರೆಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಫೋಟೋವನ್ನು, ನಾಗೇಗೌಡರ ಫೋಟೋವನ್ನು ಆ ಭಾಗದ ಮಂತ್ರಿಗಳ ಫೋಟೋಗಳನ್ನು

ತಿಂಗಳುಗಟ್ಟಲೆ ಪತ್ರಿಕೆಗಳಲ್ಲಿ ಹಾಕಿ ಅಭಿನಂದನೆಗಳನ್ನು ಸಲ್ಲಿಸಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಇಷ್ಟೆಲ್ಲಾ ಆದ ಮೇಲೆ ಸರ್ಕಾರ ತನ್ನ ಕೆಟ್ಟಪದ್ಧತಿಯನ್ನು ಏಕೆ ಬಿಡುತ್ತಿಲ್ಲ? ಇದರಿಂದ ನಮ್ಮ ಮನಸ್ಸಿಗೆ ಬಹಳಷ್ಟು ನೋವಾಗಿದೆ. ಮೊದಲು ಸೌಲಭ್ಯಗಳನ್ನು ಕೊಡುತ್ತಾರೆ, ಕೊಟ್ಟಮೇಲೆ ಅದರಲ್ಲಿ ಏನಾದರೊಂದು ಕಾಯಿದೆಯ ರೀತ್ಯವಾಗಿ ತಿರುಚಿ ಅದಕ್ಕೆ ಸಮಸ್ಯೆಗಳನ್ನು ತಂದು ಒಡ್ಡುವಂತಹ ಪರಿಸ್ಥಿತಿ ಇವತ್ತಿನ ದಿವಸ ನಮ್ಮ ಮುಂದೆ ಬಂದಿದೆ. ಸನ್ಮಾನ್ಯ ನಂಜೇಗೌಡರು ಹೇಳಿದ ಹಾಗೆ, ಒಂದು ಲಕ್ಷ ಪರಿಹಾರವನ್ನು ಯಾವುದೋ ಒಂದು ಸೈಟಿಗೆ ಕೊಡುವಾಗ ಶೇಕಡ 25ರಷ್ಟು ಡಿಪ್ರೀಸಿಯೇಷನನ್ನು ತೆಗೆಯಲಾಗುತ್ತದೆ. ಅದನ್ನು ತೆಗೆದ ಮೇಲೆ ಶೇಕಡ 33ರಷ್ಟು ಪರಿಹಾರವನ್ನು ಕೊಡುತ್ತಾರೆ. ಮತ್ತೆ ಒಂದು ವರ್ಷದ ಅವಧಿಯೊಳಗೆ ಅದಕ್ಕೆ ಶೇಕಡ 12ರಷ್ಟು ಅಧಿಕ ಹಣವನ್ನು ಕೊಡುತ್ತಾರೆ. ಕೋರ್ಟಿಗೆ ಹೋಗಿ ಹೆಚ್ಚಿನ ಪರಿಹಾರವನ್ನು ಕೇಳುತ್ತೇವೆ, ಕೋರ್ಟಿನಲ್ಲಿ ಹಲವಾರು ಸಾರಿ ಶೇಕಡ50ರಷ್ಟು ಪರಿಹಾರ ಜಾಸ್ತಿಯಾದ ಉದಾಹರಣೆಗಳಿವೆ. 50 ಪರ್ಸೆಂಟ್ ಪರಿಹಾರ ಹೆಚ್ಚಾದರೆ ಅಂದಾಜು ಒಂದು ಲಕ್ಷವಿದ್ದರೆ 45 ರಿಂದ 47 ಸಾವಿರ ರೂಪಾಯಿಗಳು ಅದಕ್ಕೆ ಹೆಚ್ಚು ಆಗುತ್ತದೆ. ಆದರೆ ನೀವು ಏನು ಶೇಕಡ 25ರಷ್ಟನ್ನು ತೆಗೆಯುವುದು ಬೇಡ ಎಂದು ಹೇಳುತ್ತೀರಿ, ಶೇಕಡ 25ರಷ್ಟನ್ನು ತೆಗೆಯುವುದಕ್ಕೆ ಒಪ್ಪಿಕೊಂಡಿದ್ದೀರಿ, ಅದನ್ನು ಬಿಟ್ಟರೆ ಒಂದು ಲಕ್ಷಕ್ಕೆ ಒಂದು ಲಕ್ಷ ಸಂಪೂರ್ಣವಾಗಿ ಅವರಿಗೆ ಪರಿಹಾರ ಬರುತ್ತದೆ. ಅದರ ಜೊತೆಗೆ ಶೇಕಡ 35ರಷ್ಟು ಏನು ಪರಿಹಾರ ಸಿಗುತ್ತದೆ. 12 ಸಾವಿರ ಅಂದಾಜು ಈ ಅಧಿಕ ಪರಿಹಾರ ಸಿಗುತ್ತದೆ. ಇದೆಲ್ಲಾ ಸೇರಿ ಅಂದಾಜು 1 ಲಕ್ಷ 42 ಸಾವಿರ ಅಥವಾ 1 ಲಕ್ಷ 45 ಸಾವಿರ ಆಗುತ್ತದೆ. ನೀವೇನು ಸರ್ಕಾರದಿಂದ ಜನತೆಗೆ 25 ಸಾವಿರ ತೆಗೆದಿದ್ದೇವೆ ಎಂಬ ಹೆಗ್ಗಳಿಕೆಯನ್ನು ಹೇಳುತ್ತೀರಿ, ಇದೇನು ಮಾಡಿದ ಹಾಗೆ ಆಗುತ್ತದೆ ಎನ್ನುವುದರ ಬಗ್ಗೆ ಸನ್ಮಾನ್ಯ ನಾಗೇಗೌಡರು ದಯವಿಟ್ಟು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ತಮ್ಮ ಉತ್ತರದಲ್ಲಿ ಅಂಕಿಅಂಶಗಳನ್ನು ಒದಗಿಸಿಕೊಡಬೇಕು ಎನ್ನುವುದು ಮೊದಲನೆಯದು. 25 ಎಕರೆ ಭೂಮಿ ಇದ್ದವರಿಗೆ ಸಾಮಾನ್ಯವಾಗಿ ಎಲ್ಲಾ ಮುಳುಗಡೆ ಸೌಲಭ್ಯವನ್ನು ಕೊಡುತ್ತಿದ್ದೇವೆ ಎನ್ನುವುದನ್ನೂ ಸಹಿತ ಆ ಸಂದರ್ಭದಲ್ಲಿ ತಾವು ಹೇಳಿದ್ದೀರಿ. ತಾವು ಸಹ ಪೇಪರ್‌ನಲ್ಲಿ ಓದಿದ್ದೀರಿ. ಇಲ್ಲಿರುವ ಎಲ್ಲಾ ಸದಸ್ಯರಿಗೂ ಇದು ಗೊತ್ತಿರುವ ವಿಷಯ. 25 ಎಕರೆ ಇದ್ದಂತವರಿಗೆ ಸಾಮಾನ್ಯವಾಗಿ ಎಲ್ಲಾ ಕುಟುಂಬದ ಯಜಮಾನ ಅವನ ಇಬ್ಬರು ಹಿರಿಯ ಮಕ್ಕಳಿಗೆ ಈ ಒಂದ ವ್ಯವಸ್ಥೆಯನ್ನು ಕೊಡುತ್ತೇವೆ ಎನ್ನುವುದು, 26,500 ಅನುಧಾನವನ್ನು ಹಾಗೂ ಇನ್ನಿತರ ಸೌಲಭ್ಯಗಳನ್ನು ಕೊಡತಕ್ಕಂಥದ್ದು ಅವರೂ ಸಹಿತ ಸಾಮಾನ್ಯರೇ, ಅವರು ಹೊಲಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಬೇಕು ಅಂದಾಗ ಆ ಪಟ್ಟಾಲ್ಯಾಂಡ್‌ಗಳು ಮತ್ತೆ ಅವರಿಗೆ ಎಲ್ಲೂ ಸಿಗುವುದಕ್ಕೆ ಸಾಧ್ಯವಿಲ್ಲ. ತಾವೇನು ಅವರಿಗೆ ಕೊಡುತ್ತೇವೆಂದು ಹೇಳಿದ್ದೀರಿ, ಅದಕ್ಕೆ ನಾವೆಲ್ಲರೂ ತುಂಬು ಹೃದಯದಿಂದ ಸ್ವಾಗತ ಮಾಡಿದ್ದೇವೆ. ಆದರೆ ಈ ಕಾರ್ಯದ ಮೇಲೆ ಯಾವುದೇ ರೀತಿಯ ಪ್ರಕ್ರಿಯೆ ಆಗಿಲ್ಲ. ಅದನ್ನೂ ಸಹಿತ ಆದಷ್ಟು ತೀವ್ರವಾಗಿ ಬಿಡುಗಡೆ ಮಾಡಲು ತಮ್ಮ ಉತ್ತರ ಏನು ಎಂಬುದರ ಬಗ್ಗೆ ತಾವು ದಯವಿಟ್ಟು ಹೇಳಬೇಕು. ಅದರ ಜೊತೆಗೆ ಬಾಗಲಕೋಟೆಯಲ್ಲಿ ಇನ್ನು ಎರಡು ತಿಂಗಳಲ್ಲಿ ಹೋದವರ್ಷಕ್ಕಿಂತ ಹೆಚ್ಚಿನ ನೀರು ಬರುವ ಸಂಭವವಿದೆ. ಈ ಸಂದರ್ಭದಲ್ಲಿ ಅಂದಾಜು 35 ಸಾವಿರ ಜನಸಂಖ್ಯೆ ಆ ನೀರಿನಲ್ಲಿ ಮುಳುಗುವಂತಹ ಸಂಭವವಿದ್ದುದಕ್ಕೆ ಆ 35 ಸಾವಿರ ಜನಸಂಖ್ಯೆಗೆ ವಸತಿ ವ್ಯವಸ್ಥೆಯನ್ನು

ಹೊಸ ಬಾಗಲಕೋಟೆಯಲ್ಲಿ ಮಾಡಬೇಕಾಗಿದೆ. ಆದರೆ ಇವರೆಗೂ ನೀವು 565 ಸೈಟುಗಳನ್ನು ಬಿಟ್ಟರೆ ಹೆಚ್ಚಿನ ಸೈಟನ್ನು ಹಂಚಿಲ್ಲ. 35 ಸಾವಿರ ಜನಸಂಖ್ಯೆ ಇರಲಿಕ್ಕೆ ಕ್ರಮಗಳನ್ನು ಕೈಗೊಂಡಿಲ್ಲ ಎನ್ನುವಂತಹ ವಿಚಾರ ನಮ್ಮದು. ಆದರೆ ನೀವು ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂಬ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ತಾವು ತಿಳಿಸಬೇಕು.

12.00 ಪಿ.ಎಂ.

ಅದರ ಜೊತೆಗೆ ಮುಳುಗಡೆ ಪ್ರದೇಶದಲ್ಲಿರತಕ್ಕ 35 ಸಾವಿರ ಜನಸಂಖ್ಯೆ ಮುಳುಗಡೆ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಅದು ಬಾಗಲಕೋಟೆ ಸಿಟಿ ಲಿಮಿಟ್‌ಗೆ ಬರುತ್ತದೆ. ಅದರಲ್ಲಿ 565 ಜನರಿಗೆ ಮಾತ್ರ ನಿವೇಶನ ಕೊಟ್ಟಿದ್ದೀರಿ, ಹೆಚ್ಚಿನ ಜನತೆಗೆ ಕೊಟ್ಟಿಲ್ಲ. ತಾವು ಯಾವ ರೀತಿ ವಸತಿಗೆ ವ್ಯವಸ್ಥೆ ಮಾಡುತ್ತೀರಿ? ಅಲ್ಲಿ ಷೆಡ್ಡುಗಳನ್ನು ಕಟ್ಟಿ ಕೊಟ್ಟು ಕುರಿ ದೊಡ್ಡಿಗೆ ತುಂಬುವಂಥ ವ್ಯವಸ್ಥೆಯಾಗುತ್ತದೋ ಅಥವಾ ವ್ಯವಸ್ಥೆ ಸರಿಯಾಗುತ್ತದೋ ಎಂಬುದನ್ನು ತಮ್ಮ ಉತ್ತರದಲ್ಲಿ ನಿರ್ದಿಷ್ಟವಾಗಿ ಹೇಳಬೇಕು. ಅದರ ಜೊತೆಗೆ ಮುಳುಗಡೆ ಪ್ರದೇಶದಲ್ಲಿರತಕ್ಕ 4(1), 6(1) ನೋಟಿಫಿಕೇಷನ್ ಆದಂತಹ ಜನತೆಗೆ ಇದುವರೆಗೆ ಪರಿಹಾರ ಸಿಕ್ಕಿಲ್ಲ. ಅವರಿಗೆ ಸಣ್ಣ ಸಣ್ಣ ಕಾಯಿದೆಗಳ ಒಂದು ಅಡಚಣೆ ತೋರಿಸುವಂಥ ಜಾಮ್‌ದಾರ್ ಸಾಹೇಬರು ತಮ್ಮ ಕಾಯಿದೆ ಚೌಕಟ್ಟಿನಲ್ಲಿ ಮಾತನಾಡುತ್ತಾ, ಜನತೆಯ ಕಳಕಳಿಯ ಸಮಸ್ಯೆ ಬಗ್ಗೆ ವಿಚಾರಣೆ ಮಾಡದೆ ನಿರ್ದಿಷ್ಟ ನಿಲುವು ತಾಳುವುದರಿಂದ ಬಹಳಷ್ಟು ತೊಂದರೆಯಾಗಿದೆ. ಸಣ್ಣ ಸಣ್ಣ ಸಮಸ್ಯೆಗಳನ್ನು ದಯವಿಟ್ಟು ಬಿಡಬೇಕು. ಕಾಯಿದೆ ರೀತಿ ಬರತಕ್ಕ ಸಮಸ್ಯೆಗಳನ್ನು ನೋಡಿ, ಅದಕ್ಕಿಂತ ಜಾಸ್ತಿ ಸಮಸ್ಯೆಗಳನ್ನು ನೋಡಲಾರದೆ ಸ್ವಲ್ಪ ರಿಲೀಫ್ ಮಾಡಿ ಪರಿಹಾರ ಕೊಡತಕ್ಕ ವ್ಯವಸ್ಥೆ ಆಗಬೇಕು. ಬಾಗಲಕೋಟೆ ಉಪನಗರದಲ್ಲಿ ಮನೆ ಕಟ್ಟಲಿಕ್ಕೆ ಸಾಮಾನ್ಯ ಜನರಿಗೆ ಕನಿಷ್ಟ ಎರಡು ವರ್ಷವಾದರೂ ಬೇಕು. ಏಕೆಂದರೆ ಅವರ ಹತ್ತಿರ, ಎಲ್ಲವನ್ನೂ ಕಳೆದುಕೊಂಡು ದುಡ್ಡು ಸಾಕಷ್ಟು ಇರುವ ಹಾಗೆ ಇಲ್ಲ. ಅಡಚಣೆಗಳು ಸಾಕಷ್ಟು ಇರುತ್ತವೆ. ದುಡ್ಡು ಇದ್ದರೆ ಅದು ಯಾವುದೋ ಖರ್ಚಿಗೆ ಹೋಗುತ್ತಿರುತ್ತದೆ. ಈ ಕಾರಣವಾಗಿ ಸರ್ಕಾರದಿಂದ ಏನು ಪರಿಹಾರ ಬಂದಿರುತ್ತದೆ ಆ ದುಡ್ಡು ಸಂಪೂರ್ಣ ಇಲ್ಲದೆ ಬಿಲ್ಡಿಂಗ್ ಕಟ್ಟಿಸುವುದು ತಡವಾಗುತ್ತದೆ. ಎರಡು ವರ್ಷ ಅಂದರೆ ಬಿಲ್ಡಿಂಗ್ ಕಟ್ಟಿಸುವುದಕ್ಕೆ ಬರಬೇಕಾದರೆ ಅಷ್ಟರೊಳಗೆ 1998-1999-2000 ಇಸವಿ ಆಗಿ ಹೋಗುತ್ತದೆ. ಅಷ್ಟರೊಳಗೆ ಬಿಲ್ಡಿಂಗ್ ಕಟ್ಟಿಸುವುದಕ್ಕಾಗುವುದಿಲ್ಲ. ಕನಿಷ್ಟ ಎರಡು ವರ್ಷದೊಳಗೆ ತಾತ್ಪೂರ್ತಿಕವಾಗಿ ಈಗಲೇ ಅವರಿಗೆ ಸೈಟು ಕೊಡುವ ವ್ಯವಸ್ಥೆ ಬಾಗಲಕೋಟೆಯಲ್ಲಿ ಆಗಬೇಕು. ಈ ಕಾರಣವಾಗಿ ಮೂರುವರೆ ಸಾವಿರ ಸೈಟುಗಳನ್ನು ಕೊಡಬೇಕು. ಇದುವರೆಗೆ ಅವರಿಗೆ ಸೈಟುಗಳನ್ನು ಕೊಟ್ಟಿಲ್ಲ. 565 ಸೈಟುಗಳನ್ನು ಮಾತ್ರ ಕೊಟ್ಟಿದ್ದೀರಿ. ಇನ್ನು ಉಳಿದದ್ದು ಕೊಡುವಂಥ ವ್ಯವಸ್ಥೆ ಆಗಬೇಕು. ಇನ್ನು ನಿವೇಶನದ ಹಂಚಿಕೆ. ನಿವೇಶನದ ಹಂಚಿಕೆಯಾಗುವಾಗ ಮೊದಲು ಆದ್ಯತೆ ಮೇಲೆ ನಿವೇಶನಗಳನ್ನು ಹಂಚುತ್ತಿದ್ದರು. ಬಾಗಲಕೋಟೆ ನಗರದಲ್ಲಿ ಒಂದು ಓಣಿಯೊಳಗೆ ಅಣ್ಣತಮ್ಮಂದಿರು ಬಳಗದವರು, ಸಂಬಂಧಿಕರು ಒಬ್ಬರಿಗೊಬ್ಬರು ಆತ್ಮೀಯತೆಯಿಂದ ಇರುತ್ತಾರೆ. ಅವರನ್ನು ತೆಗೆದುಕೊಂಡು ಹೋಗಿ ನೀವು ಬಾಗಲಕೋಟೆಯಲ್ಲಿ ಹಾಕಿದರೆ ಎರಡೂವರೆ ಕಿಲೋಮೀಟರ್ ಉದ್ದ ಇರುವ ಬಾಗಲಕೋಟೆ ನಗರ, ಹೊಸನಗರ ಇನ್ನೂ ಜಾಸ್ತಿ ಇದೆ ಒಂದು ಭಾಗದಲ್ಲಿ ಒಂದು ಜನ, ಮತ್ತೊಂದು ಭಾಗದಲ್ಲಿ

ಒಂದು ಜನ ಬಂದರೆ ಅವರ ಬಾಂಧವ್ಯ ಹೋಗಿಬಿಡುತ್ತದೆ. ಆ ಕಾರಣವಾಗಿ ಮೊದಲು ಇದ್ದ ಪದ್ಧತಿಯನ್ನು ಅನುಸರಿಸಬೇಕು. ಅದರ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ಹೇಳಬೇಕು. ಅದರ ಜೊತೆಗೆ ಹಾರ್ಟಿಕಲ್ಚರ್ ಬೆಳೆಗಳು, ಆ ಜನರು ಬಂದಿದ್ದರು. ಹಾರ್ಟಿಕಲ್ಚರ್ ಮಿನಿಸ್ಟರ್ ಅನ್ನೂ ಕೂಡ ಆ ಸಂದರ್ಭದಲ್ಲಿ ಭೇಟಿಯಾಗಿದ್ದರು. ಅವರು ಕೂಡ ಭರವಸೆ ಕೊಟ್ಟರು, ಹೆಚ್ಚಿನ ಪರಿಹಾರವನ್ನು ಗಿಡಗಳಿಗೆ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಬೋಟ್‌ನಲ್ಲಿ ಹೋಗಿ ವಿಡಿಯೋ ಮೂಲಕ ಚಿತ್ರೀಕರಣ ಮಾಡಲಾಗಿದೆ. ಜಮೀನು ಕಳೆದುಕೊಂಡು, ಬೆಳೆ ಕಳೆದುಕೊಂಡು ವರ್ಷಗಟ್ಟಲೆಯಾದರೂ ಪರಿಹಾರ ಸಿಗದಿದ್ದರೆ ಆ ಜನರು ಯಾವ ರೀತಿ ಇರಬೇಕು ? ಇದುವರೆಗೆ ಅವರಿಗೆ ಐದು ಪೈಸೆ ಪರಿಹಾರ ಸಿಕ್ಕಿಲ್ಲ. ಇದು ಸಾಮಾನ್ಯ ಸಮಸ್ಯೆ ಅಲ್ಲ. ಇದು ದೊಡ್ಡ ಪ್ರಮಾಣದ ಸಮಸ್ಯೆ. ಇವತ್ತು ನಾವೇ ಒಂದು ವ್ಯವಸ್ಥೆಯಲ್ಲಿರುವವರು ಎಲ್ಲವನ್ನು ಕಳೆದುಕೊಂಡು ರಸ್ತೆ ಬದಿಗೆ ಬಂದಾಗ ಏನು ಪರಿಸ್ಥಿತಿಯಾಗುತ್ತದೆಂಬುದನ್ನು ಮಾನವೀಯತೆಯಿಂದ ವಿಚಾರ ಮಾಡಿ ಸರ್ಕಾರ ಇದರ ಬಗ್ಗೆ ಆದಷ್ಟು ಹೆಚ್ಚಿನ ಆದ್ಯತೆ ವಹಿಸಿ ಯಾವುದೇ ತೊಂದರೆಯಾಗದಂತೆ ಮುಳುಗಡೆ ಪ್ರದೇಶದಲ್ಲಿರತಕ್ಕ ಜನರಿಗೆ ಹೆಚ್ಚಿನ ವ್ಯವಸ್ಥೆಯನ್ನು ಕಲ್ಪಿಸಬೇಕು. ಇಲ್ಲದಿದ್ದರೆ ಆ ಭಾಗದ ಜನರು ನಾವೆಲ್ಲಾ ಕೂಡಿ ಧರಣಿ ಮಾಡಬೇಕಾಗುತ್ತದೆ. ಘೋರವಾದ ಸತ್ಯಾಗ್ರಹ ಮಾಡಬೇಕಾಗುತ್ತದೆಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಗೋವಿಂದ ಮುತ್ತಪ್ಪ ಕಾರಜೋಳ (ಮುಧೋಳ್) : ಮಾನ್ಯ ಉಪಾಧ್ಯಕ್ಷರೆ, ಈಗ ಕೃಷ್ಣ ಮೇಲ್ದಂಡೆ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರತಕ್ಕ 163 ಹಳ್ಳಿಗಳ ಜನ ಈಗಾಗಲೇ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಕಳೆದ ವರ್ಷ 19-10-97ರಂದು ಎಲ್ಲಾ ಪ್ರದೇಶದಿಂದ ಮುಳುಗಡೆ ಆಗತಕ್ಕ 163 ಹಳ್ಳಿಗಳ ಜನರು ಬೆಂಗಳೂರಿಗೆ ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ನೀರಾವರಿ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಒಂದು ಘೋಷಣೆಯನ್ನು ಮಾಡಿದ್ದರು. ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ನಾವು ಬೆಲೆ ನಿಗದಿ ಮಾಡುವುದಕ್ಕೆ ಜನ ಪ್ರತಿನಿಧಿಗಳನ್ನು ಅದರಲ್ಲಿ ಸೇರಿಸುತ್ತೇವೆ. ಡಿವಿಜನಲ್ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ನಿವೇಶನದ ಬೆಲೆ ನಿಗದಿ ಮಾಡಿರಿ ಎಂದು ಹೇಳಿದ್ದರು. ಅದೇ ರೀತಿ ಮಾನ್ಯ ನಾಗೇಗೌಡರು ಆದೇಶವನ್ನೂ ಹೊರಡಿಸಿಕೊಟ್ಟಿದ್ದರು. ಆದರೆ ಮುಂದೆ 4-6 ಸಾರಿ ಪ್ರೈಸ್ ಅಡ್ವೈಸರಿ ಕಮಿಟಿಯವರು ಮೀಟಿಂಗ್ ಮಾಡಿದೆವು. ಮೀಟಿಂಗ್ ಮಾಡಿ ಬೆಲೆ ನಿಗದಿ ಮಾಡಿದೆವು. ಭೂಮಿಯನ್ನು 3 ಹಂತದಲ್ಲಿ ವಿಂಗಡಣೆ ಮಾಡಿದೆವು. ಒಂದು, 12 ತಿಂಗಳಿನಲ್ಲಿ ನೀರಾವರಿ ಆಗತಕ್ಕ ಪ್ರದೇಶ, ಇನ್ನೊಂದು ಎರಡು ಬೆಳೆ ಬೆಳೆಯತಕ್ಕ ನೀರಾವರಿ ಪ್ರದೇಶ, ಮತ್ತೊಂದು ಒಣಬೇಸಾಯ ಭೂಮಿ. ಹೀಗೆ ಮೂರು ಭಾಗವಾಗಿ ವಿಂಗಡಣೆ ಮಾಡಿದಾಗ ಕಬ್ಬು ಬೆಳೆಯತಕ್ಕಂಥ ರೈತರಿಗೆ ಸುಮಾರು 1,16,000 ದಿಂದ 1,25,000 ರೂಪಾಯಿಗಳವರೆಗೆ ಬೆಲೆ ನಿಗದಿ ಮಾಡಿದ್ದೆವು. ಇನ್ನು ಎರಡು ಬೆಳೆ ಬೆಳೆಯತಕ್ಕ ನೀರಾವರಿ ಪ್ರದೇಶದವರಿಗೆ 90 ರಿಂದ 98 ಸಾವಿರ ರೂಪಾಯಿಗಳವರೆಗೆ ಬೆಲೆ ನಿಗದಿ ಮಾಡಿದ್ದೆವು. ಒಣ ಬೇಸಾಯ ಭೂಮಿಯವರಿಗೆ 54 ರಿಂದ 60 ಸಾವಿರ ರೂಪಾಯಿಗಳವರೆಗೆ ಬೆಲೆ ನಿಗದಿ ಮಾಡಿದ್ದೆವು. ಅದನ್ನು ಪೇಮೆಂಟ್ ಮಾಡಬೇಕೆಂದು ಆಗಿನ ಜಾಮದಾರ್ ಅವರಿಗೆ ವಿನಂತಿ ಮಾಡಿಕೊಂಡಿದ್ದೇವು.

ಪ್ರೋಸೀಡಿಂಗ್ಸ್ ಮಾಡಿ ಸಮಿತಿಯ ವತಿಯಿಂದ ಕಳುಹಿಸಿಕೊಟ್ಟಿದ್ದೇವೆ. ಅವರು ಒಂದೆರಡು ಹಳ್ಳಿಗೆ ಪೇಮೆಂಟ್ ಕೂಡ ಮಾಡಿದರು. ನಂತರ ಏನಾಯಿತೆಂದರೆ, ಪಾರ್ಲಿಮೆಂಟ್ ಚುನಾವಣೆ ಬಂದ ಮೇಲೆ ಸಮಿತಿ ಸೇರುವುದಕ್ಕೆ ಆಗಲಿಲ್ಲ. ಆಮೇಲೆ ಸರ್ಕಾರಕ್ಕೆ ಅವರೇ ಮನವಿ ಮಾಡಿದರೋ ಅಥವಾ ಸರ್ಕಾರವೇ ಸ್ವತಃ ಆದೇಶ ಮಾಡಿತೋ ಗೊತ್ತಿಲ್ಲ. ಒಟ್ಟಿನಲ್ಲಿ ಪ್ರೈಸ್ ಅಡ್ವೈಸರಿ ಕಮಿಟಿಯನ್ನು ರದ್ದು ಮಾಡಿದರು. ರದ್ದು ಮಾಡಿ ಈಗ ಅಲ್ಲಿ ಬೆಲೆ ನಿಗದಿ ಮಾಡಬೇಕು. ರೀಹ್ಯಾಬಿಲಿಟೇಷನ್ ಆಫೀಸರ್ಸ್ ಏನಿದ್ದಾರೆ, ಲ್ಯಾಂಡ್ ಅಕ್ವಿಷಿಷನ್ ಆಫೀಸರ್ಸ್ ಏನಿದ್ದಾರೆ ಅವರೇ ಬೆಲೆ ನಿಗದಿ ಮಾಡಬೇಕೆಂದು ಒಂದು ತೀರ್ಮಾನವಾಯಿತು. ಅದು ಯಾವ ಕಾರಣಕ್ಕಾಗಿ ಪ್ರೈಸ್ ಅಡ್ವೈಸರಿ ಕಮಿಟಿಯನ್ನು ರದ್ದು ಮಾಡಿದರು ಎಂಬುದು ನನಗೆ ಗೊತ್ತಿಲ್ಲ. ಏನಾದರೂ ಸಕಾರಣ ಇರಬೇಕಲ್ಲಾ. ಜನತಾ ಪ್ರತಿನಿಧಿಗಳು ಅಂದರೆ ನಾವೇನೂ ಕಳ್ಳರಲ್ಲ, ಸುಳ್ಳರಲ್ಲ, ದಗಲರಲ್ಲ, ದರೋಡೆಕೋರರಲ್ಲ, ನಾವೂ ಕೂಡ ರೈತರ ಮಕ್ಕಳಿದ್ದೇವೆ. ಅಲ್ಲಿರತಕ್ಕ ಸಮಸ್ಯೆಗಳನ್ನು ಬಲ್ಲವರಿದ್ದೇವೆ. ನಮ್ಮನ್ನು ಹೊರಗಿಟ್ಟು ಸರ್ಕಾರ ಬೆಲೆ ನಿಗದಿ ಮಾಡುವುದಕ್ಕೆ ಏನು ಕಾರಣವಿತ್ತೋ ನನಗಂತೂ ತಿಳಿಯದಾಗಿದೆ. ದಯವಿಟ್ಟು ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಇನ್ನೊಂದು ವಿಷಯವೆಂದರೆ, ಮುಳುಗಡೆ ಪ್ರದೇಶದಲ್ಲಿ ಬರತಕ್ಕ 163 ಹಳ್ಳಿಗಳ ಜನರ ಮನೆಮಠಗಳು ಏನಿವೆ ಅವುಗಳಿಗೆ ಬೆಲೆ ನಿಗದಿ ಮಾಡುವಾಗ ಸರ್ಕಾರ ಸರಿಯಾದಂಥ ಕ್ರಮವನ್ನು ಅನುಸರಿಸುತ್ತಿಲ್ಲ. ಇವತ್ತು ಏನಾಗಿದೆ ಎಂದರೆ, ಸವಕಳಿ ಮುರಿಯಬಾರದೆಂದು ನಾವು ವಿನಂತಿ ಮಾಡಿದ್ದವು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಕೊಂಡು ಹೊಸ ಜಿಲ್ಲೆ ಉದ್ಘಾಟನೆ ಮಾಡುವ ಸಂದರ್ಭದಲ್ಲಿ ನಾವು ಸವಕಳಿ ಮುರಿಯುವುದಿಲ್ಲವೆಂದು ಘೋಷಣೆ ಮಾಡಿದ್ದರು. ಆಗ ನಾವು ಸ್ವಾಗತ ಮಾಡಿದೆವು. ಮಾನವೀಯತೆಯ ದೃಷ್ಟಿಯಿಂದ ಇದೊಂದು ಉತ್ತಮ ಕಾರ್ಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆಂದು ಸ್ವಾಗತಿಸಿದೆವು. ಆದರೆ ಈಗ ಏನಾಗಿದೆ ಎಂದರೆ ಅವರು ಕೋರ್ಟಿಗೆ ಹೋಗಬಾರದೆಂದು ನಿರ್ಬಂಧನೆ ಹಾಕಿದ್ದಾರೆ. ಏತಕ್ಕೆ ಹಾಗೆ ನಿರ್ಬಂಧನೆಯನ್ನೂ ಹಾಕಿದ್ದಾರೆಂದು ಗೊತ್ತಿಲ್ಲ. ಸುಮ್ಮನೆ ಕೋರ್ಟಿಗೆ ಹೋದರೆ ನ್ಯಾಯ ಸಿಗುತ್ತದೆಯೆ ? ಯಾರಿಗಾದರೂ ಅನ್ಯಾಯವಾಗಿದ್ದು ಕೋರ್ಟಿಗೆ ಹೋದರೆ ನ್ಯಾಯ ಸಿಗುತ್ತದೆ. ಅನ್ಯಾಯ ಆದವರಿಗೆ ಕೋರ್ಟಿಗೆ ಹೋಗುವ ಹಕ್ಕನ್ನು ಸರ್ಕಾರ ಮೊಟಕುಗೊಳಿಸುವ ಕೆಲಸಕ್ಕೆ ಕೈಹಾಕಬಾರದೆಂದು ವಿನಂತಿಸುತ್ತೇನೆ. ಹೋಗಲಿ, ಕ್ಲಾಸಿಫಿಕೇಷನ್ ಮಾಡುವಾಗ ಅವರು ಏನು ಮೆಟೀರಿಯಲ್ ಯೂಸ್ ಮಾಡಿದ್ದಾರೆ ಅದನ್ನು ವರ್ಗೀಕರಣ ಮಾಡುವಾಗ ಏನಾದರೂ ಅನ್ಯಾಯವಾದರೆ ಕೋರ್ಟಿಗೆ ಹೋಗುತ್ತಾರೆ. ಅವರೇ ಇರತಕ್ಕ ಸೈಟಿನ ಬೆಲೆಯಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಕೋರ್ಟಿಗೆ ಹೋಗುತ್ತಾರೆ. ಅಂಥದ್ದಕ್ಕೆ ನಿರ್ಬಂಧ ಹಾಕಬಾರದು, ದಯವಿಟ್ಟು ಅದನ್ನು ಕೈಬಿಡಬೇಕು. 4(1) ನೋಟಿಫಿಕೇಷನ್ ಆದ ತಾರೀಖಿನಿಂದ ಪೇಮೆಂಟ್ ಆಗುವ ತಾರೀಖಿನವರೆಗೆ ಪ್ರತಿಯೊಬ್ಬ ರೈತರಿಗೆ ಮನೆ ಮಠ ಕಳೆದುಕೊಂಡವರಿಗೆ ಬಡ್ಡಿ ಕೊಡಬೇಕಾಗುತ್ತದೆ. ಹಿಂದೆ ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಬಡ್ಡಿ ಕೊಡಲಾಗಿದೆ. ಬಡ್ಡಿ ಕೊಡಬೇಕೆಂದು ಸರ್ಕಾರದಲ್ಲಿ ನಿಯಮ ಇದೆ. ಆದರೆ ಇವತ್ತು ಅಧಿಕಾರಿಗಳು ಬಡ್ಡಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಬಡ್ಡಿ ಕೊಡುವುದಿಲ್ಲವೆಂದರೆ ಹೇಗೆ ? 4(1) ನೋಟಿಫಿಕೇಷನ್ ಆಗಿ 4-4 ವರ್ಷವಾದರೂ ಪೇಮೆಂಟ್ ಆಗಿಲ್ಲ. 4 ವರ್ಷದಿಂದ ರೈತರು ಬಾಯಿ ತೆರೆದುಕೊಂಡು ಕುಳಿತಿದ್ದಾರೆ. ನಮಗೆ ಪೇಮೆಂಟ್ ಸಿಗುತ್ತದೆ, ಬಡ್ಡಿ ಸಿಗುತ್ತದೆ ಎಂದು. ಆಗಿನ ರೂಪಾಯಿ ಬೆಲೆ ಮತ್ತು ಈಗಿನ ರೂಪಾಯಿ

ಬೆಲೆ ಒಂದೇ ಉಳಿದಿಲ್ಲ. ರೂಪಾಯಿನ ಬೆಲೆ ದಿನನಿತ್ಯ ಕಡಿಮೆಯಾಗುತ್ತಿದೆ. ಇಂಥ ಸಂದರ್ಭದಲ್ಲಿ ನೀವು ಬಡ್ಡಿ ಕೊಡುವುದಿಲ್ಲ ಅಂದರೆ ಇದು ಯಾವ ನ್ಯಾಯ? ಅದಕ್ಕೋಸ್ಕರ ವಿನಂತಿಸಿಕೊಳ್ಳುತ್ತೇನೆ, ನೆಗೋಸಿಯೇಷನ್, ಮಾಡಿದರೂ ಕೂಡ ಬಡ್ಡಿ ಕೊಟ್ಟು ಅವರಿಗೆ ಪೇಮೆಂಟ್ ಮಾಡಬೇಕು. ಇನ್ನೊಂದು ಏನು 163 ಹಳ್ಳಿಗಳು ಮುಳುಗಡೆಯಾಗುತ್ತಿವೆ ಆ ಜನರು ಏನು ಭೂಮಿ ಕಳೆದುಕೊಂಡಿದ್ದಾರೆ, ಅವರು ಏನು ಉದ್ಯೋಗ ಕಳೆದುಕೊಂಡಿದ್ದಾರೆ ಅವರಿಗೆ ರೀಹ್ಯಾಬಿಲಿಟೇಷನ್ ಸೆಂಟರ್‌ನಲ್ಲಿ ಸೈಟು ಕೊಟ್ಟರೆ ಬದುಕಲಿಕ್ಕೆ ಸಾಧ್ಯವಿದೆಯೆ? ಅಲ್ಲಿ ಅವರು ಏನು ಉದ್ಯೋಗ ಮಾಡಬೇಕು? ಅದಕ್ಕಾಗಿ ವಿನಂತಿಸುತ್ತೇನೆ, ಎಷ್ಟು ಕುಟುಂಬಗಳು ಮುಳುಗಡೆಯಾಗಿವೆ ಆ ಎಲ್ಲಾ ಕುಟುಂಬದವರಿಗೆ ಪ್ರತಿಯೊಬ್ಬರಿಗೆ ಅಥವಾ ಮನೆಗೆ ಒಂದಾದರೂ ನೌಕರಿ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ತಾವು ನೋಡಿದ ಹಾಗೆ ಪಂಜಾಬ್‌ನಲ್ಲಿ ಏನಾಗಿದೆ? ತಮಿಳ್ನಾಡಿನಲ್ಲಿ ಏನಾಗಿದೆ, ಆಂಧ್ರದಲ್ಲಿ ಏನಾಗಿದೆ? ನಕ್ಸಲೈಟ್ಸ್ ಇದ್ದಾರೆ, ದರೋಡೆಕೋರರು ಇದ್ದಾರೆ. ಅವರೆಲ್ಲಾ ಆ ರೀತಿ ಏತಕ್ಕೆ ಆಗಿದ್ದಾರೆ? ಉದ್ಯೋಗ ಇಲ್ಲದೆ, ನಿರುದ್ಯೋಗದಿಂದ ಯಾರು ಉಪವಾಸ ಸಾಯುವುದಕ್ಕೆ ಸಾಧ್ಯವಿಲ್ಲ ಈ ದೇಶದಲ್ಲಿ. ಇದ್ದವರ ಮನೆಯಿಂದ ತಂದು ತಿಂದು ಬದುಕಬೇಕಾಗುತ್ತದೆ. ಆ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಸರ್ಕಾರ ಬಿಡಬಾರದು. ದಯವಿಟ್ಟು ರಾಜ್ಯದಲ್ಲಿ ಏನು ನೌಕರಿ ಕೊಡುತ್ತೀರಿ, ಸರ್ಕಾರಿ ಸೇವೆಯಲ್ಲಿ ಏನು ಕೊಡುತ್ತೀರಿ, ಪ್ರತಿಯೊಂದು ಕುಟುಂಬಕ್ಕೆ ಒಂದು ನೌಕರಿ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸಿ, ಸರ್ಕಾರ ನಿರ್ಧಾರ ಮಾಡಿದ ಆದೇಶಗಳನ್ನು ಚಾಚೂ ತಪ್ಪದೆ ಜಾರಿ ಮಾಡಿ ಮುಳುಗಡೆ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರ ಜೊತೆಯಲ್ಲಿ ಸಹಕಾರ ಸಚಿವರ ವಿರುದ್ಧ ಒಂದು ಹಕ್ಕುಚ್ಯುತಿ ನಿರ್ಣಯಕ್ಕೆ ನಿನ್ನೆ ವಿನಂತಿಸಿಕೊಂಡಿದ್ದೆ. ದಯಮಾಡಿ ಅದಕ್ಕೆ ಈ ದಿನ ಅವಕಾಶ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಸಮಯದ ಅಭಾವ ಇದ್ದರೆ 24ನೇ ತಾರೀಖಾದರೂ ಕೊಡಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದು ನಿಮಿಷ ನಾನು ಹೇಳಿಬಿಡುತ್ತೇನೆ, ಪತ್ರಿಕೆಗಳನ್ನು ತಾವು ನೋಡಿದ್ದೀರಿ. ಚುನಾಯಿತ ಸದಸ್ಯರ ಪ್ರತಿಯೊಬ್ಬ ಸದಸ್ಯರ ಮರ್ಯಾದೆಯ ಪ್ರಶ್ನೆ ಇದೆ. ಘನತೆ ಗೌರವದ ಪ್ರಶ್ನೆಯಿದೆ. ಸಹಕಾರ ಸಚಿವರು ಬಂದು ಅಲ್ಲಿ ನೀವು ಏನು ಬೇಕಾದರೂ ಮಾಡಿ ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿ ಬಂದಿದ್ದಾರೆ. ನಾನು ಸತ್ತಮೇಲೆ ನೀವು ಮರ್ಯಾದೆ ಕೊಡುತ್ತೀರೋ? ನೀವು ಏನು ಬೇಕಾದರೂ ಮಾಡ್ರಿ ನಾನು ನೋಡಿಕೊಳ್ಳುತ್ತೇನೆಂದು ಹೇಳಿ ಬಂದಿದ್ದಾರೆ. ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ.

ಉಪಾಧ್ಯಕ್ಷರು : ಈಗ ನೀವು ಯಾವ ವಿಷಯದ ಮೇಲೆ ಮಾತನಾಡಲಿಕ್ಕೆ ಹೊರಟಿದ್ದೀರಿ? ನೀವು ಸದನದ ನಿಯಮಾವಳಿ ತಿಳಿದುಕೊಂಡು ಮಾತನಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ದಯವಿಟ್ಟು ಇದು ನನ್ನ ಒಬ್ಬ ಕಾರ್ಜೋಳರ ಪ್ರಶ್ನೆಯಲ್ಲ. ಇದು ಇಡೀ ಸದನದ ಸದಸ್ಯರ ಪ್ರಶ್ನೆಯಿದೆ. ಇಡೀ ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳ ಘನತೆ ಗೌರವದ ಪ್ರಶ್ನೆಯಿದೆ. ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಅವಕಾಶ ಕೊಡದಿದ್ದರೆ ನಾನು ಸತ್ಯಾಗ್ರಹ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು : ಅವರು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಉತ್ತರ ಕೊಡಲಿಕ್ಕೆ ತಯಾರಿದ್ದೇನೆ. ಪತ್ರಿಕೆಗಳಿಗೆ ನಾನು ಪ್ರಕಟಣೆ ಕೊಟ್ಟಿದ್ದೇನೆ.

ಉಪಾಧ್ಯಕ್ಷರು : ಇದು ಮುಗಿದ ಮೇಲೆ ತಾವು ಉತ್ತರ ಕೊಡಿ. ಈಗ ಮಾನ್ಯ ಚಿಮ್ಮನಕಟ್ಟಿಯವರು ಮಾತನಾಡಲಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಪ್ರದೇಶದ ರೈತರ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ತಾವು ಈ ಮನೆಯ ಗೌರವಾನ್ವಿತ ಸದಸ್ಯರಿದ್ದೀರಿ ನಾವು ಅದನ್ನು ಹೇಳುವುದಿಲ್ಲ. ಪತ್ರಿಕೆಗಳಲ್ಲಿ ಆ ರೀತಿ ಬಂದರೆ ಅಧಿಕಾರಿಗಳ ಮೇಲೆ ಪರಿಣಾಮ ಬೀಳುತ್ತದೆ. ಬೇರೆ ಎಲ್ಲರ ಮೇಲೆ ಬೀಳುತ್ತದೆ. ಅದಕ್ಕೆ ನಾನು ಈ ವಿಷಯ ಎತ್ತಿಲ್ಲ.

ಉಪಾಧ್ಯಕ್ಷರು : ಅವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ದಯಮಾಡಿ ಎಲ್ಲರೂ ಕೂಡ್ರಿ.

ಶ್ರೀ ಎಸ್.ಎಸ್. ಪಾಟೀಲ್ : ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಡಿನೈ ಮಾಡಿದ್ದೇನೆ. ಸದನದ ಸದಸ್ಯರ ಗೌರವದ ಬಗ್ಗೆ ನನಗೂ ಕಲ್ಪನೆಯಿದೆ.

ಉಪಾಧ್ಯಕ್ಷರು : ಮಾನ್ಯ ಸಹಕಾರ ಸಚಿವರಾದ ಪಾಟೀಲ್‌ರವರೇ ತಾವು ಕೂಡ್ರಿ. ಮಾನ್ಯ ಚಿಮ್ಮನಕಟ್ಟಿಯವರು ಮುಂದುವರಿಸಲಿ.

+ ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಸುಮಾರು ಮೂರು ದಿವಸಗಳಿಂದ ಬಹಳ ಉಗ್ರವಾಗಿ ರೈತರು ಹೋರಾಟ ನಡೆಸಿದ್ದಾರೆ. ರೈತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಹೇಳಿ ಸುಮಾರು ವರ್ಷಗಳಿಂದ ನಾನಾ ರೀತಿಯಿಂದ ಅವರದೇ ಆಗಿರತಕ್ಕ ಒಂದು ವ್ಯವಸ್ಥೆಯಿಂದ ಬಂದು ಮಾನ್ಯಮಂತ್ರಿಗಳಲ್ಲಿ ಮತ್ತು ಮುಖ್ಯಮಂತ್ರಿಗಳಲ್ಲಿ ಕೂಡ ಮನವಿಯನ್ನು ಸಲ್ಲಿಸಿ ಅವರ ಬೇಡಿಕೆಗಳನ್ನು ಮಂಡನೆ ಮಾಡಿದ್ದಾರೆ. ಆದಾಗ್ಯೂ ಕೆಲವು ವಿಚಾರಗಳನ್ನು ಒಪ್ಪಿದರೂ ಕೂಡ ಬಹಳ ಮುಖ್ಯವಾಗಿರತಕ್ಕ ಬೇಡಿಕೆಗಳನ್ನು ಇನ್ನೂ ಒಪ್ಪಬೇಕೆಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡಲಿಕ್ಕೆ ಈಗಾಗಲೇ ಬಹಳ ಉಗ್ರ ರೀತಿಯಲ್ಲಿ ಪ್ರತಿ ದಿನ ಸುಮಾರು 8-10 ಸಾವಿರ ಜನ ಬೇರೆ ಬೇರೆ ತಾಲ್ಲೂಕುಗಳಿಂದ ಬಂದು ಕುಳಿತು ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡುತ್ತಿದ್ದಾರೆ. ಸುಮಾರು ಮೂರು ದಿವಸಗಳಿಂದ ಪ್ರತಿಭಟನೆಯನ್ನು ವ್ಯಕ್ತಪಡಿಸಿದರೂ ಸಹ ಸರ್ಕಾರದ ಯಾವ ಪ್ರತಿನಿಧಿಗಳೂ ಕೂಡ ಬರಲಿಲ್ಲ. ಯಾರೂ ಆದೇಶವನ್ನು ಸಹ ನೀಡಲಿಲ್ಲ. ಅಲ್ಲಿರತಕ್ಕ ಜಿಲ್ಲಾಧಿಕಾರಿಗಳು ಬೆಂಗಳೂರಿನಿಂದ ಏನಾದರೂ ಫೋನ್ ಬಂತಲ್ಲವೆಂದು ಬಹಳ ನಿರೀಕ್ಷೆಯಲ್ಲಿದ್ದರೂ ಕೂಡ ಇವರಿಂದ ಯಾವುದೇ ರೀತಿಯ ಪ್ರತ್ಯುತ್ತರ ಬರಲಿಲ್ಲ. ಇಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದು ಇಷ್ಟೆ, ತಾವು ಇಂತಹ ಅನೇಕ ವಿಚಾರಗಳನ್ನು ಈಗಾಗಲೇ ಒಪ್ಪಿಕೊಂಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಬಹುಶಃ

ಅವರ ಬೇಡಿಕೆಗಳನ್ನು ನಾವು ವಿಚಾರ ಮಾಡುವಂತಹ ಸಂದರ್ಭದೊಳಗೆ ಯಾವುದೇ ಸರ್ಕಾರವಿರಬಹುದು, ಒಟ್ಟಾರೆ ಯೋಜನೆಗಳನ್ನು ಮುಗಿಸುವುದರೊಳಗೆ ಎಕ್ಸಿಕ್ಯೂಷನ್ ಬಗ್ಗೆ ಹೆಚ್ಚು ಇದ್ದಂತಹ ಆಸಕ್ತಿ ಮುಳುಗಡೆಯಾಗಿರತಕ್ಕ ರೈತರ ಮೇಲೆ ಅದು ಯಾವುದೇ ಸರ್ಕಾರವಾಗಲಿ ಕಿಂಚಿತ್ತೂ ಕೂಡ ನಾವು ಯಾರೂ ಕೂಡ ಕಾಳಜಿ ಮಾಡುವುದಿಲ್ಲ. ಉದಾಹರಣೆಗೆ ಯಾವುದಾದರೂ ಒಂದು ಸಣ್ಣ ನೀರಾವರಿ ಯೋಜನೆ ತೆಗೆದುಕೊಳ್ಳಲಿ; ಅದನ್ನು ಕಟ್ಟಲಿಕ್ಕೆ ಬಹಳ ಆಸಕ್ತಿ ತೋರಿಸುತ್ತೇವೆಯೇ ವಿನಃ ಮುಳುಗಡೆಯಾಗಿರತಕ್ಕ ರೈತರ ಕಷ್ಟದ ಬಗ್ಗೆ ನಾವು ಯಾರೂ ಕೂಡ ವಿಚಾರ ಮಾಡುವುದಿಲ್ಲ. ಇದು ಒಂದು ಸರ್ವೇಸಾಮಾನ್ಯವಾಗರಿತಕ್ಕ ಅಭಿಪ್ರಾಯ. ಇಂತಹ ಒಂದು ಬೃಹತ್ ಯೋಜನೆಯಲ್ಲಿ ಸಾವಿರಾರು ಕುಟುಂಬಗಳು ಸುಮಾರು 1 ಲಕ್ಷದ 20 ಸಾವಿರ ಕುಟುಂಬಗಳು ನಿರ್ಗತಿಕರಾಗಿರತಕ್ಕ ಸಮಸ್ಯೆ ಬಂದಾಗ, ಈಗಾಗಲೇ ಭೂಮಿ ಮತ್ತು ಮನೆ ಕಳೆದುಕೊಂಡವರಿಗೆ ಇಷ್ಟು ದುಡ್ಡು ಕೊಡುವುದಾಗಿ ಹೇಳಿದ್ದೀರಿ. ಕಬ್ಬಿನ ಬೆಳೆಗೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಅದೇರೀತಿ ನೀರಾವರಿಗೆ 90ಸಾವಿರ ಕೊಡುತ್ತೇವೆಂದು ಹೇಳಿದ್ದೀರಿ. ಖುಷ್ಕಿ ಜಮೀನಿಗೆ 54 ಸಾವಿರ ರೂಪಾಯಿ ಕೊಡಬೇಕೆಂದು ತಾವು ಒಪ್ಪಿಕೊಂಡಿದ್ದೀರಿ. ಇಲ್ಲಿ ಬಹಳ ಬಹುಮುಖ್ಯವಾಗಿರತಕ್ಕ ವಿಚಾರ ಏನೆಂದರೆ ನಿಜಾವಾಗಿಯೂ ಅವರಿಗೆ ನಾವು ಎಷ್ಟೇ ದುಡ್ಡು ಕೊಟ್ಟರೂ ಕೂಡ ಅದು ಕಡಿಮೆ. ಭೂಮಿಯನ್ನು ಕಳೆದುಕೊಂಡಿರತಕ್ಕವರು ಬಹಳ ಭಾವನಾತ್ಮಕವಾಗಿರುತ್ತಾರೆ. ಅವರು ಕುಟುಂಬವನ್ನು ಕಳೆದುಕೊಂಡು ಭೂಮಿಯನ್ನು ಕಳೆದುಕೊಂಡು ತಮ್ಮ ಮನೆಯನ್ನು ಕಳೆದುಕೊಂಡು ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಂಡು ಆ ನೋವಿನಿಂದ ನರಳತಕ್ಕ ಜನ ಏನಿದ್ದಾರೆ ಅವರಿಗೆ ನಾವು ಎಷ್ಟೇ ರೊಕ್ಕ ಕೊಟ್ಟರೂ ಕೂಡ ಅವರಿಗೆ ಅದು ಇನ್ನೂ ಕಡಿಮೆ ಅನ್ನಿಸುತ್ತದೆಯೇ ವಿನಃ ಹೆಚ್ಚೇನೂ ಇಲ್ಲ ಅದು. ಆ ದೃಷ್ಟಿಯಿಂದ ನಾವು ಕೊಡತಕ್ಕ ಹಣ ಅದು ಪರ್ಮನೆಂಟ್ ರಿಲೀಫ್ ಆಗಲಿಕ್ಕಿಲ್ಲ. ಆದರೆ ಸ್ಥಳಾಂತರಗೊಂಡಿರತಕ್ಕವರಿಗೆ ಏನೊಂದು ಒಂದು ತಾತ್ಪೂರ್ವಿಕವಾಗಿರತಕ್ಕ ಸಮಾಧಾನಕರವಾಗಿರತಕ್ಕ ಒಂದು ಸಹಾಯವೆಂದು ನಾವು ತಿಳಿದುಕೊಳ್ಳಬಹುದಾಗಿದೆ. ಇವತ್ತು ಒಬ್ಬ ರೈತನಿಗೆ ಒಂದು ಲಕ್ಷ ರೂಪಾಯಿ ಕೊಟ್ಟರೆ ಎಲ್ಲಿಯೂ ಒಂದು ಎಕರೆ ಭೂಮಿ ಸಿಗುವುದಿಲ್ಲ. ಅದೇರೀತಿ ಮನೆಯನ್ನೂ ಸಹ ಕಟ್ಟಿಸಲಿಕ್ಕೆ ಸಾಧ್ಯವಾಗಿಲ್ಲ ಇವತ್ತು. ಅವರನ್ನು ನಿರಾಶ್ರಿತರನ್ನಾಗಿ ಮಾಡುವುದಕ್ಕೆ, ಇದನ್ನು ನಾನು ಸರ್ಕಾರದಲ್ಲಿ ದಯವಿಟ್ಟು ಕಳಕಳಿಯಿಂದ ವಿನಂತಿ ಮಾಡಿ ಹೇಳುತ್ತೇನೆ, ಕಬ್ಬಿನ ಬೆಳೆಗೆ ಈಗ ಒಂದು ಲಕ್ಷದ 25 ಸಾವಿರ ರೂಪಾಯಿ ಬೇಡಿಕೆಯನ್ನು ಏನು ಇಟ್ಟಿದ್ದಾರೆ ಅದನ್ನು ತಾವು ಕನಿಷ್ಟ ಒಂದು ಲಕ್ಷದ 20 ಸಾವಿರ ರೂಪಾಯಿಗಳಿಗೆ ಒಪ್ಪಿ 90 ಸಾವಿರ ಇರುವುದಕ್ಕೆ ಬೇಕಾದರೆ 5 ಸಾವಿರ ಹೆಚ್ಚು ಮಾಡಿ 54 ಸಾವಿರ ಇದ್ದುದ್ದನ್ನು ಬೇಕಾದರೆ 5 ಸಾವಿರ ಹೆಚ್ಚುಮಾಡಿ ರೈತರನ್ನು ಸಮಾಧಾನ ಮಾಡತಕ್ಕ ಹೆಚ್ಚಿನ ನೈತಿಕ ಹೊಣೆ ಸರ್ಕಾರದ ಮೇಲಿದೆ ಏನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಅದೇ ರೀತಿಯಲ್ಲಿ ಅವರು ಕಳೆದುಕೊಂಡ ಭೂಮಿಗೆ ಪರಿಹಾರ ಕೊಡತಕ್ಕ ಸಂದರ್ಭದೊಳಗೆ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಒಂದಲ್ಲ ಒಂದು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ತಾವೇ ಬೇಕಾದರೆ ಸ್ಥಾನಿಕ ಚೌಕಾಸಿ ಮಾಡಿ ಯಾವ್ಯಾವ ರೈತರು ಇದ್ದಾರೆ ಯಾರು ಎಷ್ಟೆಷ್ಟು ಜಮೀನು ಕಳೆದುಕೊಂಡಿದ್ದಾರೆ ಯಾರು ಮನೆ ಕಳೆದುಕೊಂಡಿದ್ದಾರೆ ಅವರಿಗೆ ನೇರವಾಗಿ ಚೆಕ್ ಮೂಲಕ ಹಣ ಕೊಡತಕ್ಕ ಸೌಲಭ್ಯವನ್ನು

ತಾವು ತೀವ್ರಗತಿಯಿಂದ ಮಾಡಬೇಕು. ಅದರ ಜೊತೆಗೆ ಸವಕಳಿ ಮುರಿಯುವುದಕ್ಕೆ ಈಗಾಗಲೇ ಸರ್ಕಾರ ಒಪ್ಪಿದೆ. ಅದರ ಜೊತೆಗೆ ಇನ್ನೊಂದು ಮುಖ್ಯವಾದುದೆಂದರೆ ಸಂತ್ರಸ್ಥರ ಮಕ್ಕಳಿಗೆ ನೌಕರಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಲಿರತಕ್ಕವರು ಬಹಳ ತಬ್ಬಲಿಯಾಗುತ್ತಾರೆ. ಜಮೀನು ಇದ್ದವರು ಏನಾದರೂ ಒಂದು ಪರಿಹಾರದ ರೂಪದಲ್ಲಿ ದುಡ್ಡು ತೆಗೆದುಕೊಳ್ಳಬಹುದು. ಆದರೆ ಅನೇಕ ಜನ ಕಾರ್ಮಿಕರು ಕೂಲಿ ಕೆಲಸ ಮಾಡತಕ್ಕವರು ಅಂತಹವರ ಮಕ್ಕಳು ಬಹಳ ತಬ್ಬಲಿಯಾಗುತ್ತಾರೆ. ದಯವಿಟ್ಟು ಸರ್ಕಾರ ಅವರ ಸಲುವಾಗಿ ಇವತ್ತು ನೇಮಕಾತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಯಾವುದೇ ಕಾನೂನಿನ ತೊಂದರೆಯನ್ನು ತೋರಿಸಿ ಅದನ್ನು ಮುಂದೆ ಹಾಕತಕ್ಕ ಕೆಲಸವನ್ನು ದಯವಿಟ್ಟು ಮಾಡಬಾರದು. ಕಾನೂನಿಗೆ ಯಾವುದೇ ರೀತಿಯ ತಿದ್ದುಪಡಿಯನ್ನು ತಂದು ಆ ಭಾಗದ ರೈತರ ಮಕ್ಕಳಿಗೆ ಅನುಕೂಲವಾಗುವ ರೀತಿಯೊಳಗೆ ತಾವು ಕೆಲಸ ಮಾಡಬೇಕು. ಅದರ ಜೊತೆಗೆ ಇನ್ನೊಂದು ಮುಖ್ಯಾವಾದುದು ಅಂದರೆ 2000ದ ಇಸವಿಯೊಳಗೆ ಈಗಾಗಲೇ ಡ್ಯಾಮ್ ಕಟ್ಟಿ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವ ಹಂತದೊಳಗೆ ಇದ್ದೇವೆ. ಆದಷ್ಟು ಶೀಘ್ರವಾಗಿ ಮುಳುಗಡೆಯಾಗತಕ್ಕ ಪ್ರದೇಶದೊಳಗೆ ಅನೇಕ ಚಿಕ್ಕ ಏತನೀರಾವರಿ ಯೋಜನೆಗಳಿವೆ. ಆ ಏತನೀರಾವರಿ ಯೋಜನೆಗಳನ್ನು ಬಹಳ ತೀವ್ರಗತಿಯಲ್ಲಿ ತೆಗೆದುಕೊಂಡು ಬಹುಶಃ ಒಂದು ವರ್ಷದೊಳಗೆ ಮುಗಿಸಿದ್ದೇ ಆದರೆ ಆ ಭಾಗದ ರೈತರಿಗೆ ಆಗತಕ್ಕ ತೊಂದರೆಗಳಿಗೆ ಸರ್ಕಾರ ಭಾಗಿಯಾಗಿದೆಯೆಂದು ನಾವು ತಿಳಿದುಕೊಳ್ಳಬಹುದು.

+ ಶ್ರೀ ಆರ್. ಎಂ. ಕಲೂತಿ (ಜಮಖಂಡಿ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದ್ದಾರೆ. ಮುಳುಗಡೆಯಾಗತಕ್ಕ ರೈತರ ಸಮಸ್ಯೆಯನ್ನು ಸುಮಾರು ವರ್ಷಗಳಿಂದ ಸರ್ಕಾರದ ಮುಂದೆ ಅನೇಕ ಬಾರಿ ಬೇಡಿಕೆಯ ಮುಖಾಂತರ ನೀರಾವರಿ ಮಂತ್ರಿಗಳಾದ ಮಾನ್ಯ ನಾಗೇಗೌಡರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಮ್ಮ ಜಿಲ್ಲೆಯ ಶಾಸಕರು ಮತ್ತು ಲೋಕಸಭಾ ಸದಸ್ಯರು ಅನೇಕ ಸಲ ಮೀಟಿಂಗನ್ನು ಮಾಡಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಕೆಲವು ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಅನೇಕ ಸಲ ಹೇಳಿದರೂ ಕೂಡ ಇದುವರೆಗೆ ಆ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಆಗಿಲ್ಲ. ಆ ಸಮಸ್ಯೆಗಳು ಬಗೆಹರಿಯದಿರುವುದರಿಂದ ಸುಮಾರು ಮೂರು ದಿವಸಗಳಿಂದ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ ಮುಳುಗಡೆಯಾಗತಕ್ಕ ರೈತರು ಅಲ್ಲಿ ಧರಣಿ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಸೇರಿದ ಶಾಸಕರು ಮತ್ತು ಸಂಸತ್‌ಸದಸ್ಯರು ಭಾಗವಹಿಸಿ ಬಹಳ ತೀವ್ರ ಪ್ರಮಾಣದಲ್ಲಿ ಸತ್ಯಾಗ್ರಹ ನಡೆದಿದೆ. ಆದರೂ ಕೂಡ ನಮ್ಮ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಮಹತ್ವ ಪೂರ್ಣವಾದ ಬೇಡಿಕೆಗಳನ್ನು ಕೂಲಂಕುಷವಾಗಿ ಸರ್ಕಾರ ಬೇಗನೆ ಪರಿಶೀಲನೆ ಮಾಡಿ ಇವತ್ತು ಅದನ್ನು ಬಗೆಹರಿಸಿದರೆ ಮುಳುಗಡೆಯಾಗತಕ್ಕ ರೈತರಿಗೆ ಬಹಳಷ್ಟು ಅನುಕೂಲ ಮಾಡಿ ಕೊಟ್ಟಹಾಗೆ ಆಗುತ್ತದೆಂದು ಹೇಳುತ್ತೇನೆ. ಇದನ್ನು ಬೇಗನೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ : ನಾನೂ ಸಹಿ ಮಾಡಿದ್ದೇನೆ? ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಸಹಿ ಮಾಡಿದ್ದೀರಿ, ಆ ಭಾಗದ ಎಲ್ಲಾ ಶಾಸಕರು ಮಾತನಾಡಿದ್ದಾರೆ ತಾವು ಹೇಗೆ? ವಿಧೇಯಕಗಳ ಮೇಲೆ ಚರ್ಚೆ ಇನ್ನೂ ಆಗಿಲ್ಲ. ಇನ್ನ ಆಗಿಲ್ಲ. ನಾನು ಹೇಗೆ ಮಾಡಬೇಕು ಹೇಳಿ?

ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಉಪಾಧ್ಯಕ್ಷರೆ, ನಾನು ಆ ಕ್ಷೇತ್ರದ ಮೊಮ್ಮಗ, ಆ ಕ್ಷೇತ್ರದ ಅಳಿಯ ನಾನು. ನಮ್ಮ ಬೀಗರ ಜಮೀನು ಎಲ್ಲಾ ಮುಳುಗಿ ಹೋಗುತ್ತದೆ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚು ವೇಳೆ ತೆಗೆದುಕೊಳ್ಳುವುದಿಲ್ಲ. ಬಹುತೇಕವಾಗಿ ನಾಗೇಗೌಡರೇ, ತಾವು ಒಪ್ಪಿದ್ದೀರಿ, ಮುಖ್ಯಮಂತ್ರಿಗಳೂ ಒಪ್ಪಿದ್ದೀರಿ, ಏಕೆ ಈಗ ತಿರುಗಿ ಬೀಳುವ ಪ್ರಸಂಗ ಬಂದಿದೆಯೇ ಗೊತ್ತಿಲ್ಲ. ದಯಮಾಡಿ ಮೊದಲು ಏನೇನು ಒಪ್ಪಿದ್ದೀರಿ, ಅವೆಲ್ಲವನ್ನೂ ಅಲ್ಲಿ ಈಡೇರುವ ಹಾಗೆ ಮಾಡಿರಿ. ಆನೆ ಹೋಗುವಾಗ ಬಾಲಕ್ಕೆ ಶಾಣ್ಯತನ ಮಾಡಿದಿರಿ ಎಂದು ಹೇಳಿ ಮತ್ತೆ ಆ ಜನರ ರೋಷಕ್ಕೆ ತಾವು ಗುರಿಯಾಗತಕ್ಕದ್ದು ಅಲ್ಲ. ಮೊದಲು ಒಪ್ಪಿದ್ದೆಲ್ಲವನ್ನೂ ತಾವು ಈಡೇರಿಸಬೇಕು. ಅಧಿಕಾರಿಗಳ ಮಾತು ಕೇಳಿ ಅದಕ್ಕೆ ಅವಕಾಶ ಕೊಡದೆ ಜನಪ್ರತಿನಿಧಿಗಳು ಇರುವಂಥ ಪ್ರೈಸ್ ಫಿಕ್ಸೇಷನ್ ಕಮಿಟಿಯವರು ಏನು ಫಿಕ್ಸ್ ಮಾಡಿರುತ್ತಾರೆ ಅದನ್ನು ಕೊಡುವ ಹಾಗೆ ತಾವು ಮಾಡಬೇಕು. ಸಂಪೂರ್ಣ ಹಣ ಬೇಗ ಅವರಿಗೆ ಸಿಗುವಹಾಗೆ ಆಗಬೇಕು. ನಾಳೆ ಜೂನ್‌ನಲ್ಲಿ ಮಳೆಗಾಲದೊಳಗೆ ಮುಳುಗಡೆಯಾಗುವಂಥ ಪ್ರದೇಶಗಳಿಗೂ ಸಹಿತ ಇನ್ನೂ 4(1) ನೋಟಿಫಿಕೇಷನ್ ಆಗಿಲ್ಲ. ಇಂತಹ ಎಲ್ಲಾ ಪರಿಸ್ಥಿತಿ ಇದ್ದಾಗ ಅವರೆಲ್ಲರೂ ನಿಮಗೆ ಇಲ್ಲಿಯವರೆಗೂ ಸಹಕಾರ ಮಾಡುತ್ತಲೇ ಬಂದಿದ್ದಾರೆ. ಅದಕ್ಕಾಗಿ ದಯವಿಟ್ಟು ಇದರೊಳಗೆ ಯಾವುದೇ ರಾಜಕೀಯ ಬಾರದಹಾಗೆ ಅಧಿಕಾರಿಗಳ ಮಾತಿಗೆ ಕಿವಿ ಕೊಡದಹಾಗೆ ಜನಪ್ರತಿನಿಧಿಗಳು ಹೇಳುವ ಮಾತಿಗೆ ಬೆಲೆ ಬರುವಹಾಗೆ ತಾವು ನಿರ್ಣಯ ಮಾಡಬೇಕು. ನಿಮ್ಮ ನಿರ್ಣಯದಿಂದ ಅವರು ಏನು ಈಗ ಉಪವಾಸ ಕೂತಿದ್ದಾರೆ ಅವರೆಲ್ಲರೂ ಉಪವಾಸ ಸತ್ಯಾಗ್ರಹವನ್ನು ಬಿಟ್ಟು ಏಳುವಹಾಗೆ ನಿಮ್ಮ ನಿರ್ಣಯವನ್ನು ಸದನದಲ್ಲಿ ಪ್ರಕಟಿಸಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಸೋಮಶೇಖರ್‌ರವರೇ ಉತ್ತರ ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ಅವರು ಉತ್ತರ ಹೇಳಲಿ. ಆಮೇಲೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ರಾಜಶೇಖರ ಶೀಲವಂತ : ಯಾರು ಉತ್ತರ ಕೊಡಬೇಕೆಂಬುದರ ಬಗ್ಗೆಯೇ ಇನ್ನೂ ನಿರ್ಧಾರವಾಗಿಲ್ಲವೆಂದರೆ ನಮ್ಮ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ?

ಉಪಾಧ್ಯಕ್ಷರು : ನೀವು ಹೊಸಬರು ಇದ್ದೀರಿ. ಗಡಿಬಿಡಿ ಮಾಡಬೇಡಿ. ಅವರು ಹೇಳುತ್ತಾರೆ. ಸೋಮಶೇಖರ್‌ರವರೇ ಹೇಳಿ.

+ ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ನನ್ನ ಉತ್ತರ ಹೀಗಿದೆ:-

ಕೃಷಿ ಮೇಲ್ದಂಡೆ ಯೋಜನೆ ಮುಳುಗಡೆ ಹಿತರಕ್ಷಣಾ ಸಮಿತಿಯು ಈ ಕೆಳಕಂಡ ಬೇಡಿಕೆಗಳನ್ನು ಮಂಡಿಸಿ ಅವುಗಳ ಈಡೇರಿಕೆಯಾಗುವವರೆವಿಗೆ ಅಮರಣಾಂತ ಉಪ ವಾಸ ಕೈಗೊಳ್ಳುವುದಾಗಿ ಹಾಗೂ ದಿನಾಂಕ 15.4.1998ರಂದು ಬೆಳಗ್ಗೆ ಬೃಹತ್ ಧರಣಿ ಸತ್ಯಾಗ್ರಹ ಪ್ರಾರಂಭಿಸುವುದಾಗಿ ತಿಳಿಸಿ ಘೋಷಣಾ ಪತ್ರವನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ ದಿನಾಂಕ 9-4-1998ರಂದು ಸಲ್ಲಿಸಿರುತ್ತಾರೆ. ಸತ್ಯಾಗ್ರಹ ಚಳುವಳಿ ಪ್ರಾರಂಭಿಸಿದ್ದು ಸರ್ಕಾರದ ಗಮನ ಸೆಳೆದಿದೆ. ಅವರ ಬೇಡಿಕೆಗಳು ಈ ರೀತಿ ಇವೆ:-

1) ಕಟ್ಟಡಗಳ ಮೌಲ್ಯಮಾಪನ ಮಾಡುವಾಗ ಸವಕಳಿ ಮುರಿಯಬಾರದೆಂಬ ಬಗ್ಗೆ;

2) ಸಂತ್ರಸ್ತರ ಮಕ್ಕಳಿಗೆ ಸರಕಾರಿ ನೌಕರಿಯಲ್ಲಿ ಶೇಕಡ 15ರಷ್ಟು ಮೀಸಲಾತಿ ನಿಗದಿಪಡಿಸುವ ಬಗ್ಗೆ;

3) ಬೆಲೆ ನಿಗದಿ ಸಲಹಾ ಸಮಿತಿಯವರು ಮಾಡಿದ ಶಿಫಾರಸಿನಂತೆ ಮುಳುಗಡೆ ಭೂಮಿಗೆ ಕಿಮ್ಮತ್ತು ಕೊಡಬೇಕು;

4) ಭೂಮಿಯ ಬೆಲೆಯನ್ನು ನಿಗದಿ ಪಡಿಸುವಾಗ ಖುಷ್ಕಿ ಜಮೀನು, ನೀರಾವರಿ ಜಮೀನು, ಮತ್ತು ಕಬ್ಬು ಪ್ರದೇಶವೆಂದು ವರ್ಗೀಕರಣ ಮಾಡುವಾಗ ಈಗಿದ್ದ ಆಡಳಿತಾತ್ಮಕ ತೊಂದರೆಗಳಾದ ನೀರೆತ್ತುವ ಅನುಮತಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರ ಅನುಮತಿ ಇತ್ಯಾದಿಗಳನ್ನು ಒತ್ತಾಯಿಸದೆ, ಪಹಣಿ ಪತ್ರಿಕೆ ಮತ್ತು ಸ್ಥಳ ಪರೀಕ್ಷಣೆಯನ್ನು ಆಧಾರವಾಗಿಟ್ಟುಕೊಂಡು ವಿಶೇಷ ಭೂಸ್ವಾಧೀನ ಅಧಿಕಾರಿಗಳು ಆದೇಶ ಘೋಷಿಸುವುದಾಗಬೇಕು.

ಈ ಬೇಡಿಕೆಗಳನ್ನು ಸರ್ಕಾರವು ಸಹಾನುಭೂತಿಯಿಂದ ಪರಿಶೀಲಸಿದೆ. ಹಾಗೂ ದಿನಾಂಕ28.3.98ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 140 ಭೂಸ್ವಾವಿ 98 ದಿನಾಂಕ 13-4-1998ರನ್ನು ಹೊರಡಿಸಲಾಗಿದ್ದು, ಈ ಆದೇಶದನ್ವಯ ಕಟ್ಟಡಗಳ ಪರಿಹಾರವನ್ನು ಐತೀರ್ಪಿನ ನಿರ್ಣಯದಂತೆ ಲೋಕೋಪಯೋಗಿ ಇಲಾಖೆಯ ಇತ್ತೀಚಿನ ಜಿಲ್ಲಾ ದರಗಳ ಪಟ್ಟಿಗೆ ಅನುಗುಣವಾಗಿ ಹಾಗೂ ಮೌಲ್ಯಮಾಪನ ಸಮಿತಿ ಮತ್ತು ಮಾಲೀಕರ ಪರಸ್ಪರ ಒಪ್ಪಿಗೆ ಮೇರೆಗೆ ನಿರ್ಧರಿಸಲಾಗುವುದು. ಕಟ್ಟಡಗಳ ವರ್ಗೀಕರಣ ಮತ್ತು ಬೆಲೆಗೆ ನಿಗದಿಗೆ ಸಂಬಂಧಿಸಿದಂತೆ ಸೂತ್ರಗಳನ್ನು ಕಂದಾಯ ಇಲಾಖೆಯು ಹೊರಡಿಸುವುದೆಂದು ಆದೇಶಿಸಲಾಗಿದೆ. ಮುಂದುವರಿದಂತೆ ಜಮೀನನ್ನು ಮುಖ್ಯವಾಗಿ ಒಣಭೂಮಿ ಮತ್ತು

ತರೀಭೂಮಿ ಎಂದು ಎರಡು ವರ್ಗೀಕರಣ ಮಾಡಿ ಈ ಜಮೀನುಗಳಿಗೆ ಪರಿಹಾರಧನವನ್ನು ಈ ಕೆಳಕಂಡಂತೆ ನಿಗದಿ ಮಾಡಲಾಗಿದೆ.

1. **ಬೆಳಗಾವಿ ವಿಭಾಗ:**

ಒಣಭೂಮಿ (ಪ್ರತಿ ಎಕರೆಗೆ):

ನೀರಾವರಿ ಜಮೀನು	ರೂ. 48,000-00
ಮುಳುಗಡೆ ಜಮೀನು	ರೂ. 54,000-00

ತರೀ ಭೂಮಿ (ಪ್ರತಿ ಎಕರೆಗೆ):

ವರ್ಷದಲ್ಲಿ ಒಂದು ಬೆಳೆ ಬೆಳೆಯುವ ಭೂಮಿ	ರೂ. 90,000-00
ವರ್ಷದಲ್ಲಿ ಎರಡು ಬೆಳೆ ಬೆಳೆಯುವ ಭೂಮಿ	ರೂ. 1,00,000-00

2. ಗುಲಬರ್ಗ ವಿಭಾಗದಲ್ಲಿ ಹಾಲಿ ಚಾಲ್ತಿಯಲ್ಲಿರುವ ಮೌಲ್ಯವೇ ಮುಂದುವರೆಯುತ್ತದೆ.

ಭೂಮಿ ಹಾಗೂ ಕಟ್ಟಡಗಳಿಗೆ ಯೋಗ್ಯವಾದ ಪರಿಹಾರ ಮೌಲ್ಯವನ್ನು ತರಬೇಕೆಂಬ ಉದ್ದೇಶದಿಂದ ಬೆಲೆ ಸಲಹಾ ಸಮಿತಿಯನ್ನು ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಈ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರು, ಕಾನೂನು ಕೋಶದ ಮುಖ್ಯಸ್ಥರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಯವರು, ಭೂಸ್ವಾಧೀನಾಧಿಕಾರಿಯವರು, ಕೃಷಿ ಭೂಮಿಯ ಬಾಬ್ತಿನಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಸದಸ್ಯರಾಗಿರುತ್ತಾರೆ.

ಸಂತ್ರಸ್ತರ ಮತ್ತೊಂದು ಬೇಡಿಕೆಯಾದ ಸರ್ಕಾರಿ ನೇಮಕಾತಿಗಳಲ್ಲಿ ಸಂತ್ರಸ್ತರ ಕುಟುಂಬದ ಸದಸ್ಯರುಗಳಿಗೆ ಶೇಕಡಾ 15ರಷ್ಟು ಮೀಸಲಾತಿ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ. ಸಂವಿಧಾನದ ಅನುಚ್ಛೇದ 16(1)ರಡಿಯಲ್ಲಿ ಈಗಾಗಲೇ ಮಾಜಿ ಸೈನಿಕರಿಗೆ, ಅಂಗವಿಕಲರಿಗೆ, ಮತ್ತು ಮಹಿಳೆಯರಿಗೆ ಮೀಸಲಾತಿ ನೀಡಿದ್ದು, ಉಳಿದ ಶೇಕಡಾ 5ರಷ್ಟು ಹುದ್ದೆಗಳ ಮೀಸಲಾತಿ ಪ್ರಮಾಣವನ್ನು ಯೋಜನೆಗಳಿಂದ ತೊಂದರೆಗೆ ಒಳಗಾದ ಸಂತ್ರಸ್ತರಿಗೆ ನೀಡಬಹುದಾಗಿದ್ದು, ಈ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು ಶೀಘ್ರವಾಗಿ ತೀರ್ಮಾನ ಕೈಗೊಳ್ಳಲಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೇ, ಒಂದು ನಿಮಿಷ ....

ಉಪಾಧ್ಯಕ್ಷರು : ಅವರು ಪೂರಾ ಮುಗಿಸಲಿ. ಅವಸರ ಮಾಡಿದರೆ ಹೇಗೆ? ನಾಗೇಗೌಡರು ಉತ್ತರ ಹೇಳಲಿ. ಕಂದಾಯ ಸಚಿವರು ಈಗ ಹೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಕಟ್ಟಡಗಳ ಮೌಲ್ಯಮಾಪನ ಮಾಡುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕಂಥ ಶೆಡ್ಯುಲ್ಡ್ ಪ್ರೈಸ್ ಅನ್ವಯವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಲೀಡ್ ಚಾರ್ಜಸ್ ಕೊಡುವುದಿಲ್ಲ. ಅವರ ಮನೆ ಪಕ್ಕದಲ್ಲಿ ಕಲ್ಲು ಸಿಗುತ್ತದೆ, ವಸತಿ ಸಿಗುತ್ತದೆ ಎಂದು ಹೇಳಿ ಬೆಲೆ ನಿಗದಿಮಾಡುವುದಕ್ಕೆ ಹೊರಟಿದ್ದಾರೆ. ಎಸ್ಟಿಮೇಟ್ ಮಾಡುವಾಗ ಲೀಡ್ ಚಾರ್ಜಸ್ ಕನ್ಸಿಡರೇಷನ್ ಮಾಡಿಲ್ಲ. ದಯಮಾಡಿ ನೀವು ಸರ್ಕಾರಿ ಕಟ್ಟಡಗಳಿಗೆ ಎಲ್ಲಿಂದ ಮೆಟೀರಿಯಲ್ಸ್ ತರುತ್ತೀರಿ, ಅಲ್ಲಿಂದಲೇ ಪ್ರತಿಯೊಂದು ಕಟ್ಟಡಕ್ಕೂ ಲೀಡ್ ಚಾರ್ಜಸ್ ಕೊಡಬೇಕು. ಅದನ್ನು ಸೇರಿಸುತ್ತಿಲ್ಲ. ಅದಕ್ಕಾಗಿ ದಯವಿಟ್ಟು ತಾವು ಉತ್ತರ ಕೊಡುವಾಗ ಕ್ಲಿಯರ್ ಮಾಡಬೇಕು.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಈಗಾಗಲೇ ಅವರ ಬೇಡಿಕೆ ಏನಿತ್ತು, ಯಾವುದೇ ಡಿಪ್ರಿಸಿಯೇಷನ್ ಮುರಿದುಕೊಳ್ಳಬಾರದು, ನೂರಕ್ಕೆ ನೂರರಷ್ಟು ಬೆಲೆ ನಿಗದಿಮಾಡಬೇಕು ಅಂತ ಹೇಳಿ. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಅದನ್ನು ಪಿ.ಡಬ್ಲ್ಯೂ.ಡಿ ಯವರು ಸರಿಯಾಗಿ ನಿಗದಿ ಮಾಡಿ ವರದಿ ಕೊಡುತ್ತಾರೆ. ಅದರ ಪ್ರಕಾರ ನಾವು ಕೊಡುತ್ತೇವೆ.

+ ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಆಲಮಟ್ಟಿಯಲ್ಲಿ ಸಬ್‌ಮರ್ಜ್ ಆಗತಕ್ಕಂಥ ಟೋಟಲ್ ಜಮೀನು ಸುಮಾರು ಮೂರು ಲಕ್ಷ ಐವತ್ತು ಸಾವಿರ ಎಕರೆ. ಈಗ ನಾವು ಅಕ್ವೈರ್ ಮಾಡಿಕೊಂಡಿರತಕ್ಕಂಥ ಜಮೀನು ಸುಮಾರು ಒಂದು ಲಕ್ಷ ನಲ್ವತ್ತು ಸಾವಿರ ಎಕರೆಯಷ್ಟು. ಮುಳುಗಡೆಯಾಗತಕ್ಕಂಥ ಒಟ್ಟು ಹಳ್ಳಿಗಳು 205. 205 ಹಳ್ಳಿಗಳಲ್ಲಿ ನಾವು ಸುಮಾರು 150 ಹಳ್ಳಿಗಳಿಗೆ ವಿವಿಧ ಹಂತದಲ್ಲಿ ಪುನರ್‌ವ್ಯವಸ್ಥೆ ಮತ್ತೊಂದು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಈ ಹಳ್ಳಿಗಳಲ್ಲಿ ಸುಮಾರು 70 ಸಾವಿರ ಮನೆಗಳು ಬರುತ್ತವೆ. ಮಾನ್ಯ ನಂಜೇಗೌಡರು ಒಂದು ರಿಲೆವೆಂಟ್ ಪಾಯಿಂಟನ್ನು ರೈಸ್ ಮಾಡಿದ್ದಾರೆ. ಅದು ಯಾವುದು ಎಂದರೆ 519ಕ್ಕೆ ಎಷ್ಟು, 509ಕ್ಕೆ ಎಷ್ಟು, 524ಕ್ಕೆ ಎಷ್ಟು ...... ಆ ಎಫ್.ಆರ್.ಎಲ್. ಬಂದಾಗ, ಫುಲ್ ರಿಸರ್ವಾಯರ್ ಲೆವಲ್ ಬಂದಾಗ ಎಷ್ಟು ಎಕರೆ ಸಬ್‌ಮರ್ಜ್ ಆಗುತ್ತದೆ ಎನ್ನತಕ್ಕಂಥಾದ್ದನ್ನು ತಿಳಿಸಬೇಕು ಎಂದು ತಾವು ಹೇಳಿದ್ದೀರಿ, 205 ಹಳ್ಳಿಗಳು ಎಂದು ನಾನು ಹೇಳಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ದೇಶದಲ್ಲೇ ಅಲ್ಲ, ಇಡೀ ಏಷಿಯಾದಲ್ಲೇ ಇಷ್ಟು ರೀತಿ ಮುಳುಗಡೆಯಾಗತಕ್ಕದ್ದು ಇಲ್ಲ. ಸುಮಾರು 3 ಲಕ್ಷ 50 ಸಾವಿರ ಎಕರೆ ಎಂದು ಹೇಳಿದರೆ ತಾವೇ ಆಲೋಚನೆ ಮಾಡಬೇಕು. ಮಾನ್ಯ ನಂಜೇಗೌಡರು ನೀರಾವರಿ ಮಂತ್ರಿಯಾಗಿ ನಮ್ಮೆಲ್ಲರಿಗಿಂತ ಚೆನ್ನಾಗಿ ತಿಳಿದುಕೊಂಡವರು.ನಮ್ಮ ನೀರಾವರಿಗೆ ಖರ್ಚು ಮಾಡತಕ್ಕಂಥ ಹಣಕ್ಕೆ ಒಂದು ಬೆನಿಫಿಟ್ ರೇಷಿಯೋ ಎಂದು ಇದೆ. ಅದು ಒಂದು ಪರ್ಸೆಂಟ್‌ಗಿಂತ ಕಡಿಮೆಯಾದರೆ ಸಿಕ್ಕಾಪಟ್ಟೆ ದುಡ್ಡು ಖರ್ಚುಮಾಡಿ ಇಷ್ಟೆಲ್ಲಾ ಮುಳುಗಡೆ ಮಾಡಿ ಸುಮಾರು ಹತ್ತಾರು ಸಾವಿರ ಕೋಟಿ ಖರ್ಚು ಮಾಡಿದರೂ ಅದು ಪ್ರಯೋಜನವಾಗುವುದಿಲ್ಲ. ಈ ಆಲಮಟ್ಟಿಯಲ್ಲಿ ನಾವು ಬೆನಿಫಿಟ್ ರೇಷಿಯೋ ಮಿನಿಮಮ್ ಒಂದು ಪರ್ಸೆಂಟ್ ಮೈನ್‌ಟೇನ್ ಮಾಡಿಕೊಂಡು ಮಾಡುವುದಕ್ಕೆ ಆಗುತ್ತಿಲ್ಲ. ಆದರೂ ಸಹಿತ ಇವತ್ತಿನದಿವಸ ಅವರು ತ್ಯಾಗ ಜೀವಿಗಳು ಎಂಬುದರಲ್ಲಿ ಎರಡನೆಯ ಮಾತೇ ಇಲ್ಲ. ಇಡೀ ಅವರ ನೂರಾರು ವರ್ಷ ಬದುಕಿನ ಭಾವನಾತ್ಮಕವಾಗಿದ್ದಂಥ ಸ್ಥಳವನ್ನು ಬಿಟ್ಟು

ಸ್ಥಳಾಂತರವಾಗತಕ್ಕಂಥ ವಿಚಾರ ಅದು ದೇಶಕ್ಕೆ ಅವರದ್ದು ಬಂದು ದೊಡ್ಡ ತ್ಯಾಗ. ಅದಕ್ಕೆ ನಾವು ಬೆಲೆ ಕಟ್ಟುತ್ತಿಲ್ಲ. ಮಾನ್ಯ ಜೆ.ಎಚ್. ಪಟೇಲರು ಮುಖ್ಯಮಂತ್ರಿಗಳಾದ ಮೇಲೆ ನಾನು ಮೊಟ್ಟಮೊದಲನೆಯ ಬಾರಿಗೆ ಬಾಗಲಕೋಟೆಗೆ ಹೋದಾಗ ಸುಮಾರು ಹತ್ತು-ಹದಿನೈದು ವರ್ಷಗಳಿಂದ ಇದು ಇತ್ಯರ್ಥವಾಗಿರಲಿಲ್ಲ. ನಾನು ರಾಜಕೀಯ ಮಾತನಾಡುವುದಕ್ಕೆ ಹೋಗುವುದಿಲ್ಲ. ಬಿ.ಎಸ್. ಪಾಟೀಲರು ನಮ್ಮ ಹಿರಿಯಕರು. One of the senior most members of his House. ಅವರು ಇರಿಗೇಶನ್ ಮಿನಿಸ್ಟರ್ ಆಗಿ ಆ ಭಾಗದಲ್ಲೇ ಇದ್ದರು. ಎಸ್.ಎಂ. ಕೃಷ್ಣ ಅವರು ಇರಿಗೇಷನ್ ಮಿನಿಸ್ಟರ್ ಆಗಿದ್ದರು. ಈ ಮಾತನ್ನು ನಾನು ರಾಜಕೀಯ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿಂದ ಬಂದಿರತಕ್ಕಂಥ ಕಲೂತಿಯವರಿಗೆ ಗೊತ್ತು, ಬಿ. ಎಸ್. ಪಾಟೀಲರಿಗೆ ಗೊತ್ತು, ಜಿ. ಟಿ. ಪಾಟೀಲರಿಗೆ ಗೊತ್ತು. ಅಲ್ಲಿರತಕ್ಕಂಥ ಹುಲಿ ವೆಂಕಟರೆಡ್ಡಿ ವಂಶಸ್ಥರಾದ ಡಿ. ಆರ್. ಪಾಟೀಲರಿಗೆ ಗೊತ್ತು. ಕಳೆದ ಒಂದು ವರ್ಷದಿಂದ ಎಷ್ಟು ನಾವು ಮಾಡಿದ್ದೇವೆ ಎಂದು ಹೇಳಿದರೆ, ಇಲ್ಲಿಯವರೆಗೆ 96ರವರೆಗೆ 250 ಕೋಟಿ ಪರಿಹಾರ ಕೊಟ್ಟಿದೆ. ಇನ್ನು ಒಂದೂವರೆ ವರ್ಷದಲ್ಲಿ 150 ಕೋಟಿ ಪರಿಹಾರ ಕೊಟ್ಟಿದ್ದೇವೆ. ಮತ್ತೆ 440 ಕೋಟಿ ಎನ್‌ಮಾರ್ಕ್ ಮಾಡಿ 400 ಕೋಟಿ ಕೃಷ್ಣಭಾಗ್ಯ ಜಲನಿಗಮದಲ್ಲಿ ಕೊಡಬೇಕು ಎಂದು ಹೇಳಿ ಇಟ್ಟುಕೊಂಡಿದ್ದೇವೆ. ಅದನ್ನೇ ಖರ್ಗೆಯವರು ಗಲಾಟೆ ಮಾಡುತ್ತಿರುವುದು ಅದೇನೆಂದು ಹೇಳಿದರೆ 1200 ಕೋಟಿ ಎಂದು ನೀವು ಹೇಳಿದಿರಲ್ಲಾ, ಬರೇ 771 ಕೋಟಿ ಎಂದು ಇದೆ. ಈ 771 ಕೋಟಿ ಬರೇ ಸಿವಿಲ್ ವರ್ಕ್‌ಗೆ ಆದರೆ ಈ ದುಡ್ಡು ಏಕೆ ಇಟ್ಟುಕೊಂಡಿದ್ದೀರಿ ಎಂದು. ಈ ವ್ಯಾಜ್ಯವೇ ಇದ್ದದ್ದು. ಈ ವ್ಯಾಜ್ಯ ಇದ್ದರಿಂದ ಆಗಿರಲಿಲ್ಲ. ಅದನ್ನು ನಾವೀಗ ಮತ್ತೊಂದು ಸಾರಿ ರೀಸರ್ವೆ ಮಾಡುತ್ತಿದ್ದೇವೆ. 99ರ ಮಾನ್‌ಸೂನ್‌ಗೆ ಫುಲ್ ರಿಸವಾರ್ಯರ್ ಬರುವುದರಿಂದ ರೀಸರ್ವೆ ಮಾಡಿಸುತ್ತಿದ್ದೇವೆ. ಈಗ ಇರತಕ್ಕಂಥ ವಿಚಾರ ಯಾವುದು ಎಂದರೆ, ಬಹಳ ಪ್ರಾಮುಖ್ಯವಾಗಿ ಇವರು ಚಳುವಳಿಗೆ ಎಂದು ಇಲ್ಲಿ ಬಂದಿದ್ದರು. ಅದು ಒಂದಲ್ಲ, ಎರಡಲ್ಲ, ಮೂರಲ್ಲ, ಹತ್ತಾರು ಮೀಟಿಂಗ್‌ಗಳನ್ನು ನಾವು ಮಾಡಿದ್ದೇವೆ.

12.30 ಪಿ.ಎಂ

ಇವೆಲ್ಲವನ್ನೂ ಮಾಡಿ ಒಂದು ಮೂಲಭೂತವಾದ ವಿಚಾರಕ್ಕೆ ಗಮನಹರಿಸಿದ್ದೇವೆ. ಇಲ್ಲಿ ಭೂಮಿಗೆ ಪರಿಹಾರವನ್ನು ಕೊಡತಕ್ಕಂಥಾದ್ದು ಮೂಲಭೂತವಾದ ವಿಚಾರ. ಈ ವಿಚಾರದಲ್ಲಿ ಮಾನ್ಯ ಕಂದಾಯ ಸಚಿವರು ಹೇಳಿದಂತೆ ಎಕರೆಗೆ 54 ಸಾವಿರ ರೂಪಾಯಿಗಳಿಗೆ ಡ್ರೈಲ್ಯಾಂಡ್‌ಗೆ ಒಪ್ಪಿದ್ದಾರೆ. ಜಮಖಂಡಿ, ಬೀಳಗಿ ಮತ್ತು ಬಾಗಲಕೋಟೆ ತಾಲ್ಲೂಕುಗಳಿವೆ. ಬೆಲೆಯು ಈ ತಾಲ್ಲೂಕುಗಳಲ್ಲಿ ವ್ಯತ್ಯಾಸವಿದೆ. ಇಂಡಿ ತಾಲ್ಲೂಕಿನಲ್ಲಿದ್ದಂಥ ಬೆಲೆಯು ಬೀಳಗಿ ತಾಲ್ಲೂಕಿನಲ್ಲಿಲ್ಲ. ನಾನು ಆ ಊರುಗಳಿಗೆ ಹತ್ತಾರು ಸಾರಿ ಹೋಗಿ ಅಲ್ಲಿನ ರೈತರುಗಳ ಹತ್ತಿರ ಮಾತನಾಡಿ ಎಲ್ಲಾ ವಿಚಾರಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಆದರೆ ನಾವು ಇಂಡಿ ತಾಲ್ಲೂಕಿಗೂ ಬೀಳಗಿ ತಾಲ್ಲೂಕಿಗೂ ಒಂದೇ ರೇಟನ್ನು ಕೊಟ್ಟಿದ್ದೇವೆ. ಹೀಗೆ 54 ಸಾವಿರ ರೂ.ಗಳನ್ನು ನಾವು ಒಣಭೂಮಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದನ್ನು ಅವರು ಒಪ್ಪಿದ್ದಾರೆ. ಅದರ ಬಗ್ಗೆ ಯಾವುದೇ ಡಿಸ್ಪ್ಯೂಟ್ ಇಲ್ಲ. ಅದು ಅವರುಗಳ ಬೇಡಿಕೆಯಾಗಿತ್ತು. ನಾವು ಪ್ರೈಸ್ ಫಿಕ್ಸೇಷನ್ ಕಮಿಟಿಯನ್ನು ಮಾಡಿದ್ದೇವೆ. ಇಡೀ

ದೇಶದಲ್ಲಿಯೇ ಇಂಥ ನಾನ್ ಅಫೀಷಿಯಲ್ ಕಮಿಟಿಯನ್ನು ಯಾರೂ ಮಾಡಿರಲಿಲ್ಲ. ಹೀಗೆ ಮಾಡಿದ ತತ್‌ಕ್ಷಣವೇ ನಮ್ಮ ಮೆಂಬರ್ ಒಬ್ಬರು I do not want to mention his name. ಅವರು ಹಿಗ್ಗಾಮುಗ್ಗಾ ಏರಿಸಿ ಬಿಟ್ಟರು. ಹೀಗೆ ನೂರಾರು ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕೊಡತಕ್ಕಂಥ ರೀತಿಯಲ್ಲಿ ಏರಿಸಿ ಬಿಟ್ಟರೆ, ನಮಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆರ್ಥಿಕವಾಗಿಯೂ ಕೂಡ ಅವರು ನೋಡಿಕೊಳ್ಳಬೇಕು. ಈ ಬೆನಿಫಿಟ್ ರೇಷಿಯೋ ಕ್ರಾಸ್ ಆಗಬಾರದು. ಮಾನ್ಯ ಖರ್ಗೆಯವರು ಅಲ್ಲಿನ ಅಧಿಕಾರಿಗಳು ಬಹಳ ಬಿಗಿಮುಷ್ಟಿಯಿಂದ ಇದ್ದಾರೆ ಎಂದು ಹೇಳಿದರು. ಅವರಿಗೆ ಗೊತ್ತು ಜಾಮ್‌ದಾರ್ ಎಂಥ ಅಧಿಕಾರಿ ಎಂಬುದು ಗೊತ್ತು. He is one of the best officers in our state. The best officer in the state, that I have ever come across.

ಶ್ರೀ ಡಿ. ಕೆ. ಶಿವಕುಮಾರ್ : ಅಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಡುತ್ತಿದ್ದೀರಿ.

ಶ್ರೀ ಕೆ. ಎನ್. ನಾಗೇಗೌಡ : ಒಳ್ಳೆಯ ಅಧಿಕಾರಿಗಳ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಬೇಕಾಗುತ್ತದೆ. ತಾವುಗಳು ಮಂತ್ರಿಗಳಾಗಿ ಕೆಲಸ ಮಾಡಿದವರು ಆಗಿದ್ದೀರಿ. ಜಾಮ್‌ದಾರ್ ಎಂಥವರು ಎಂಬ ಬಗ್ಗೆ ಶಿವಕುಮಾರ್‌ರವರಿಗೂ ಗೊತ್ತು. ಜಾಮ್‌ದಾರ್ ನಮಗೆ ಬೆನಿಫಿಟ್ ರೇಷಿಯೋ ಕ್ರಾಸ್ ಆದರೆ ಪ್ರಾಜೆಕ್ಟ್ ಹಾಳಾಗುತ್ತದೆ ಎಂದು ಹೇಳಿದ್ದಾರೆ. ಹೀಗೆ ಅವರು 54 ಸಾವಿರ ರೂಪಾಯಿಗಳಿಗೆ ಒಪ್ಪಿದ್ದಾರೆ. ಇನ್ನು ವೆಟ್‌ಲ್ಯಾಂಡ್ ವಿಚಾರಕ್ಕೆ ಬರೋಣ. ಆಗ ವೆಟ್‌ಲ್ಯಾಂಡ್‌ಗೆ ಒಂದು ರೇಟ್ ಮತ್ತು ಷುಗರ್‌ಕೇನ್‌ಲ್ಯಾಂಡ್‌ಗೆ ಒಂದು ರೇಟ್ ಕೊಡಬೇಕೆಂದು ಕೇಳಿದರು. ಷುಗರ್‌ಕೇನ್ ಅಂದರೆ ಹಾರ್ಟಿಕಲ್ಚರ್ ಭೂಮಿ. ಇಲ್ಲಿ ಮಹಾರಾಷ್ಟ್ರದವರು ಮತ್ತು ನಮ್ಮವರೂ ಕೂಡ ಕೃಷ್ಣಾವ್ಯಾಲಿ ಪ್ರದೇಶದಲ್ಲಿ ಎಲ್ಲಾ ನೀರನ್ನು ರಾಜ್ಯ ಸರಕಾರಗಳ ಪರ್ಮಿಶನ್ ತೆಗೆದುಕೊಳ್ಳದೇ ನಮ್ಮವರು ಮತ್ತು ಮಹಾರಾಷ್ಟ್ರದವರು ಮಾಡಿಕೊಂಡು ಬಂದಿದ್ದಾರೆ. ಅದು 50 ವರ್ಷಗಳಾಗಿರ ಬಹುದು, 100 ವರ್ಷಗಳೂ ಆಗಿರಬಹುದು. ಅಲ್ಲಿ ನೂರಾರು ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ಬೆಳೆದಿದ್ದಾರೆ. ಹೀಗಾಗಿ ಅವು ಯಾವ ಅಥರೈಸೇಷನ್ ಕೂಡ ಆಗಿಲ್ಲ. ಹಾಗಾಗಿ ಅವುಗಳನ್ನು ಇರಿಗೇಷನ್ ಲ್ಯಾಂಡ್ ಎಂದು ನಾವು ಕರೆಯುವುದಕ್ಕೆ ಬರುವುದಿಲ್ಲ. ಆದರೂ ಕೂಡ ನಾವು ರೈತರು ಅಲ್ಲಿ ಹತ್ತಾರು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ, ಅವರಿಗೆ ಯಾವುದೇ ತರಹದ ಅನ್ಯಾಯವಾಗ ಬಾರದು, ಅವರಿಗೆ ಪವರ್ ಇತ್ಯಾದಿಯನ್ನು ಕೆಇಬಿಯವರು ಯಾಕೆ ಕೊಟ್ಟರು ಎಂಬಿತ್ಯಾದಿ ಪ್ರಶ್ನೆ ಅಲ್ಲ, ಎಂಬುದನ್ನು ಹೇಳಿ ವೆಟ್-1 ಮತ್ತು ವೆಟ್-2 ಎಂದು ಕ್ಲಾಸಿಫಿಕೇಷನ್ ಮಾಡಿದೆವು. ವೆಟ್-1ಕ್ಕೆ ಹಾರ್ಟಿಕಲ್ಚರ್ ಫಾರಂಸ್ ಮತ್ತು ನೀರಾವರಿ ಇರತಕ್ಕಂಥಾದ್ದಕ್ಕೆ 90 ಸಾವಿರ ಎಂದು ಮಾಡಿದ್ದಕ್ಕೆ ಒಪ್ಪಿದ್ದಾರೆ. ಅವರು ಹೇಳಿದ ರೇಟ್ 90 ಸಾವಿರಕ್ಕೆ ನಾವು ಒಪ್ಪಿದ್ದೇವೆ. ಇದು ಸಚಿವಸಂಪುಟದಲ್ಲಿ ಕೂಡ ಒಪ್ಪಿಗೆಯಾಯಿತು. ಇದನ್ನು ಮುಖ್ಯಮಂತ್ರಿಗಳು ಒಪ್ಪಿದರು. 54 ಸಾವಿರ ಡ್ರೈಲ್ಯಾಂಡ್‌ಗೆ ಕೊಡಬೇಕೆನ್ನುವುದನ್ನು ಒಪ್ಪಿದರು. ಮೂರನೇದಾಗಿ ವೆಟ್-2 ವಿಚಾರದಲ್ಲಿ ಅದು ಕಬ್ಬಿನ ಬೆಳೆ ಎಂದು ಅವರು ಹೇಳುತ್ತಿದ್ದಾರೆ. ಆ ಕಬ್ಬಿನ ಬೆಳೆಯನ್ನು ಅವರು ಅಲ್ಲಿ ಹೇಗೆ ಬೆಳೆದರು ಎಂಬ ಹಿನ್ನೆಲೆಯನ್ನು ನಾನು ಈಗ ಹೇಳಲು ಹೋಗುವುದಿಲ್ಲ. ರೈತರು ಕಳೆದುಕೊಳ್ಳುತ್ತಿರುವ ಭೂಮಿಗೆ ಇಷ್ಟು

ಕೊಡಿ ಎಂದು ಕೇಳುತ್ತಿದ್ದಾರೆ ಅದನ್ನು ಕೊಡೋಣ. ಅದಕ್ಕೆ 1 ಲಕ್ಷದ 15 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಡೆಲಿಗೇಷನ್, ನಮ್ಮ ಜಿ. ಟಿ. ಪಾಟೀಲ್, ರೈತರು, ಮುಖಂಡರು ಎಲ್ಲರೂ ಬಂದರು. ನಮ್ಮ ಅಧಿಕಾರಿಗಳು ನಾವು 90 ಸಾವಿರ ಎಂದು ಸಜೆಸ್ಟ್ ಮಾಡಿದ್ದೆವು. ಕ್ಯಾಬಿನೆಟ್‌ನಲ್ಲಿ ನಾನು ಮತ್ತು ಮಾನ್ಯ ಪ್ರಕಾಶ್‌ರವರು ವಾದ ಮಾಡಿ ಹತ್ತು ಸಾವಿರ ಜಾಸ್ತಿ ಕೊಡಬೇಕೆಂದು ವಾದ ಮಾಡಿ, ಒಂದು ಲಕ್ಷಕ್ಕೆ ಲಿಮಿಟ್ ಮಾಡಿಕೊಳ್ಳಿ ಎಂದು ಹೇಳಿದ್ದೆವು. ಇಂಥ ಒಟ್ಟು ಭೂಮಿಯು 2-3 ಪರ್‌ಸೆಂಟ್‌ನಷ್ಟು ಬರಬಹುದು. When compared with the total acquired land, it is not more than 2%. ಅದು ವೆಟ್‌ಲ್ಯಾಂಡ್‌ನಲ್ಲಿ ನೀರಿನ ಸವಲತ್ತು ಇದೆ, ಅದಕ್ಕಾಗಿ ಒಂದು ಲಕ್ಷವನ್ನು ಕೊಡಬೇಕೆಂದು ತೀರ್ಮಾನವಾಯಿತು. ಹೀಗೆ ಇಲ್ಲಿಯೇ ಇದ್ದ ನಿಯೋಗದವರಿಗೆ ನಾವು ಒಂದು ಲಕ್ಷ ಕೊಡುತ್ತೇವೆ ಎಂದು ಹೇಳಿದರೂ, ಇಲ್ಲ ನಮಗೆ ಒಂದು ಲಕ್ಷದ 15 ಸಾವಿರ ರೂ.ಗಳನ್ನು ಕೊಡಬೇಕೆಂದು ಹೇಳಿದ ಕಾರಣ ಅದೊಂದು ಡಿಸ್ಪ್ಯೂಟ್ ಉಳಿದಿದೆ. ಈಗ 1ಲಕ್ಷ ಕೊಡಬೇಕೆ 1 ಲಕ್ಷದ 15 ಸಾವಿರ ಕೊಡಬೇಕೇಎಂಬ ವಿಚಾರ ಇದೆ. ಇನ್ನು ಮೂರನೇ ವಿಚಾರ ಅಂದರೆ ಸವಕಳಿ ಬಗ್ಗೆ. ಸವಕಳಿ ಬಗ್ಗೆ ನಾನು ಸದನದಲ್ಲಿ ಹೇಳಿದರೆ ಯಾರೂ ತಪ್ಪಾಗಿ ಭಾವಿಸಬಾರದು. ಸವಕಳಿಗೆ ನಮಗೆ ಹಣ ಬೇಕಾಗಿಲ್ಲ, ಸರಕಾರದಿಂದ ನಮಗೆ ಬಾಂಡ್ಸ್ ಕೊಡಿಸಿ ಎಂದು ಹೇಳಿದರು. That was their initial demand. ಇನಿಷಿಯಲ್ ಡಿಮ್ಯಾಂಡ್‌ನಲ್ಲಿ ನಮಗೆ ಬರೇ ಬಾಂಡ್ಸ್ ಕೊಡಿಸಿಬಿಡಿ, ನಮಗೆ ದುಡ್ಡು ಬೇಡ ಎಂದು ಹೇಳಿದರು. ಹೀಗೆ ಕೊಡುವುದಾದರೆ ನಮಗೆ ಸುಮಾರು 350 ಕೋಟಿ ರೂಪಾಯಿಗಳಷ್ಟು ಹಣ ಡಿಪ್ರೀಸಿಯೇಷನ್‌ಗೆ ಬೇಕಾಗುತ್ತದೆ. Rs. 350 crores above the originally acquired rates. ನಾವು ಡಿಪ್ರೀಸಿಯೇಷನ್‌ಗೆ ಬರೀ ಬಾಂಡನ್ನು ಕೊಡುತ್ತೇವೆ ಎಂದು ಹೇಳಿದೆವು. ನಮ್ಮ ಮಾನ್ಯ ಸದಸ್ಯರಾದ ಕಾರಜೋಳರವರು ಕೂಡ ಅಂದು ಇದ್ದರು. ಮಾನ್ಯ ಜಿಗಜಿಣಗಿಯವರೂ ಕೂಡ ಇದ್ದರು. ಅಂಥ ಬಹಳ ಮೀಟಿಂಗ್‌ಗಳನ್ನು ಮಾಡಿದ್ದೆವು. ಆಗ ನಾನು ಸವಕಳಿ ವಿಚಾರ ಈಗ ಬೇಡ, ಮೊದಲು ವೆಟ್ ಮತ್ತು ಡ್ರೈ ಕ್ಲಾಸಿಫಿಕೇಷನ್ ಮಾಡಿಕೊಳ್ಳಿ ಎಂದು ಹೇಳಿದೆ. ಮೊದಲು ಇದರ ಹಣವನ್ನು ತೆಗೆದುಕೊಳ್ಳಿ. ಡಿಪ್ರೀಸಿಯೇಷನ್ ವಿಚಾರವನ್ನು ಆ ಮೇಲೆ ನೋಡೋಣ ಎಂದು ಹೇಳಿದೆ. ಅದಕ್ಕೆ ಅವರು ಆಗಬಹುದು ಎಂದು ಹೇಳಿದ್ದರು. ಡಿಪ್ರಿಸಿಯೇಷನ್ ವಿಚಾರ ಬಂದಾಗ ಮಾನ್ಯ ನಂಜೇಗೌಡರು ಒಂದು ಸಜೆಷನ್ ಮಾಡಿದರು. ಖರ್ಗೆಯವರು ಮತ್ತು ಕಾರಜೋಳರವರೂ ಕೂಡ ಸಲಹೆಗಳನ್ನು ಕೊಟ್ಟಿದ್ದಾರೆ. ಕೋರ್ಟ್‌ಗೆ ಹೋಗಲು ಅವಕಾಶ ಮಾಡಿಕೊಡಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಕೋರ್ಟ್‌ಗೆ ಹೋದರೆ ಲಾಯರ್‌ಗಳಿಗೆ ಮಾತ್ರ ಹೆಚ್ಚು ಬೆನಿಫಿಟ್ ಆಗುತ್ತದೆ ಎಂದು ಮಾನ್ಯ ನಂಜೇಗೌಡರು ಹೇಳಿದ್ದಾರೆ. ಇಂಥ ವಿಚಾರದಲ್ಲಿ ಕೋರ್ಟ್‌ಗೆ ಹೋದಾಗ ಲಾಯರ್‌ಗಳಿಗೆ ಹೆಚ್ಚಾಗಿ ಲಾಭವಾಗುವುದನ್ನು ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ನೋಡುತ್ತಾ ಇದ್ದೇವೆ. ನಾನು ಲಾಯರ್‌ಗಳಿಗೆ ದೋಷಾರೋಪಣೆ ಮಾಡುತ್ತಾ ಇಲ್ಲ. ಹಾರಂಗಿ ಮುಂತಾಗಿ ಎಲ್ಲಾ ಕೇಸ್‌ಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಇದು ಸ್ಪಷ್ಟವಾಗುತ್ತದೆ. ಆದ್ದರಿಂದ ಲಾಯರ್ಸ್ ಹತ್ತಿರ ಹೋಗುವುದು ಬೇಡ, ಅಲ್ಲಿಯ ಮೆಂಬರ್ಸ್, ಇಲ್ಲಿಯ ಮೆಂಬರ್ಸ್ ಎಲ್ಲರೂ ಸೇರಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರೋಣ. 25 ಪರ್‌ಸೆಂಟ್ ಅಂದರೆ 100 ರೂ. ಒಂದು ಮನೆಯ ಬೆಲೆ ಇದ್ದರೆ, 75

ರೂ.ಗಳು ಎಂದು ಮಾಡಿದರೆ 75 ಮತ್ತು 33 ಪರ್‌ಸೆಂಟ್ ಮತ್ತು 12 ಪರ್‌ಸೆಂಟನ್ನು ಸೇರಿಸಿ ಕ್ಯಾಲುಕಲೇಟ್ ಮಾಡಿ ಹೇಳಿದರು. ನಾವು ಸರಕಾರದವರು 140 ಪರ್‌ಸೆಂಟ್‌ಗೆ ಒಪ್ಪಿಗೆ ಕೊಟ್ಟು ಮಾನ್ಯ ಖರ್ಗೆಯವರಿಗೆ ಒಪ್ಪಿಸುತ್ತೇವೆ. ಆದರೆ ರೈತರು ಕೋರ್ಟ್‌ಗೆ ಹೋಗಕೂಡದು. ದೇಶದಲ್ಲಿನ ಯಾವುದೇ ಪ್ರಾಜೆಕ್ಟ್‌ಗಳ ವಿಚಾರವನ್ನು ತೆಗೆದುಕೊಂಡರೂ ಇದು ಸ್ಪಷ್ಟವಾಗುತ್ತದೆ. ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶಗಳಲ್ಲಿನ ಪ್ರಾಜೆಕ್ಟ್‌ಗಳ ವಿಚಾರವನ್ನು ನೋಡಿದಾಗ 31 ಪರ್‌ಸೆಂಟ್‌ಗೂ ಅಧಿಕ ನಾವು ಕೊಟ್ಟಿದ್ದೇವೆ ಭಾರತದೇಶದಲ್ಲಿಯೇ ಎಲ್ಲಿಯೂ ಈ ಬೆಲೆಯನ್ನು ಯಾರೂ ಕೊಟ್ಟಿಲ್ಲ. ನಾವು ಒಂದಲ್ಲ ಮೂವತ್ತು ಪರ್‌ಸೆಂಟ್‌ನಷ್ಟು ಜಾಸ್ತಿ ಕೊಡುತ್ತಾ ಇದ್ದೇವೆ. 30% more when compared to any other projects. ನಾವು ನಾರಾಯಣಪುರದಲ್ಲಿ ಅಕ್ವೈರ್ ಎಲ್ಲಾ ಮಾಡಿಬಿಟ್ಟಿದ್ದೇವೆ. ಅಲ್ಲಿ ಒಂದು ಲೀಗಲ್ ಪಾಯಿಂಟ್ ಇದೆ. ಈಗ ಮಾಡಿಕೊಂಡಿರುವವರಿಗೆ ಕೊಡಬೇಕೇ ಬಿಡಬೇಕೇ ಎಂಬ ವಿಚಾರ ಇದೆ. ಇಲ್ಲಿ ನಮಗೂ ಇವರಿಗೂ ಇರತಕ್ಕಂಥ ವ್ಯತ್ಯಾಸ ಏನೆಂದರೆ, ಕೋರ್ಟ್‌ಗೆ ಹೋಗದೇ ಇದ್ದರೆ ಸರಕಾರಕ್ಕೆ ಸುಮಾರು 50 ಕೋಟಿ ರೂ.ಗಳು ಉಳಿಯುತ್ತದೆ. ಕೋರ್ಟ್‌ಗೆ ಹೋದರೆ 50 ಕೋಟಿ ಹೆಚ್ಚು ಕೊಡಬೇಕಾಗುತ್ತದೆ. 300 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಅವರು 350 ಕೋಟಿಗಳನ್ನು ಲೆಕ್ಕ ಮಾಡಿ ಕೇಳುತ್ತಾ ಇದ್ದಾರೆ. ಹೀಗೆ 50 ಕೋಟಿಗಳ ವ್ಯತ್ಯಾಸವಿದೆ. ನಾವು ಕೋರ್ಟ್‌ಗೆ ಹೋದರೆ ಲಾಯರ್‌ಗಳಿಗೆ ಬೆನಿಫಿಟ್ ಆಗುತ್ತದೆ. ನೂರಕ್ಕೆ ನೂರು ಸವಕಳಿ ಮುರಿಯುವುದಿಲ್ಲ. ಸವಕಳಿ ಮುರಿಯುವುದಿಲ್ಲ ಎಂದು ಹೇಳಿದ್ದಾಗಿದೆ. ಮಾನ್ಯ ಕಾರಜೋಳರವರು ಮೆಟೀರಿಯಲ್ಸ್ ಲೀಡ್ ಕೊಡಿ ಎಂದು ಹೇಳಿದ್ದಾರೆ. ಎಷ್ಟೋ ವರ್ಷದ ಮನೆಗಳಿಗೆ ಹೀಗೆ ಕೊಡಿ ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅದರ ಅರ್ಥ ಹಾಗಲ್ಲ. ಈ ವ್ಯಾಲ್ಯುಯೇಷನ್ ಮಾಡುವಾಗ ಏನು ಮಾಡಿದ್ದಾರೆ ಎಂದು ರೈತರೂ ಕೂಡ ಹೇಳಿದ್ದರು ಮತ್ತು ಮಾನ್ಯ ಸರ್‌ನಾಯಕ್‌ರವರೂ ಕೂಡ ಬಂದು ರೆಪ್ರಸೆಂಟ್ ಮಾಡಿದ್ದರು. ವ್ಯಾಲ್ಯುಯೇಷನ್ ಮಾಡುವಾಗ ಏನು ಮಾಡುತ್ತಾರೆ ಅಂದರೆ, ಲೀಡ್ ಎಲ್ಲಿಂದ ತೆಗೆದುಕೊಂಡಿದ್ದಾರೆ ಅಂದರೆ, ಉದಾಹರಣೆಗೆ ಮನೆ ಪಕ್ಕದಲ್ಲಿಯೇ ಹಳ್ಳ ಇದೆ. ಅಲ್ಲಿಂದಲೇ ಕಲ್ಲುತಂದಿದ್ದೀರಿ. ಅದೇ ರೀತಿಯಲ್ಲಿ ನಿಮ್ಮ ಸರಕಾರಿ ಬಿಲ್ಡಿಂಗನ್ನು ಆ ಊರಿನಲ್ಲಿಯೇ ಕಟ್ಟಿಸಿದ್ದೀರಿ ಅದಕ್ಕೆ ಎಲ್ಲಿಂದ ಲೀಡ್ ತೆಗೆದುಕೊಂಡಿದ್ದೀರಿ ನೀವು? ಅವರು ಮಣ್ಣನ್ನು ಬೇರೆ ಕಡೆಯಿಂದ ತಂದು ಮಾಡಿದ್ದಾರೆ. ಅದಕ್ಕಾಗಿ ಅಧಿಕಾರಿಗಳು ವ್ಯಾಲ್ಯುಯೇಷನ್ ತಪ್ಪು ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆಕ್ಚುಯಲ್ ಆಗಿ ಎಲ್ಲಿಂದ ತಂದಿದ್ದಾರೋ ಅಲ್ಲಿಂದ ಕೊಡಲಿ ಮತ್ತು ಅದರ ಪ್ರಕಾರವೇ ವ್ಯಾಲ್ಯುಯೇಷನ್ ಮಾಡಲಿ ಎಂದು ಹೇಳುತ್ತಿದ್ದಾರೆ. ಲೀಡ್ ಅಂದರೆ ವ್ಯಾಲ್ಯುಯೇಷನ್ ಮಾಡುವಾಗ ಹಾಗೆ ಪರಿಗಣಿಸಿ ಎಂದು ಅವರ ವಾದ.

ಶ್ರೀ ಕೆ. ಎನ್. ನಾಗೇಗೌಡ : ಈ ವಿಚಾರವನ್ನು ನಾವೇ ಚರ್ಚಿಸಿ ಒಂದು ನಿರ್ಣಯಕ್ಕೆ ಬರೋಣ. ಈ ಲೀಡ್ ಕೊಡುವುದನ್ನು ಯಾರೂ ಮಿಸ್‌ಯೂಸ್ ಮಾಡಿಕೊಳ್ಳದ ಹಾಗೆ ಒಂದು ಮಿನಿಮಮ್ ಫೀಟೋ, ಮೀಟರ್ ಅಥವಾ ಕಿಲೋಮೀಟರ್ ಅಥವಾ ಎಂದು ನಿಗದಿ ಮಾಡೋಣ. ಸರಕಾರದವರು

ಹೇಗೆ ಮಾಡಿದ್ದಾರೋ ಹಾಗೆ ಮಾಡುವುದಕ್ಕೂ ನಾನು ತಯಾರಿದ್ದೇನೆ. ಅದಕ್ಕೆಲ್ಲಾ ಅಭ್ಯಂತರ ಇಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಮ್ಮ ಮುಖ್ಯಮಂತ್ರಿಯವರು ತುಂಬಾ ಲಿಬರಲ್ ಆಗಿ ಚಿಂತನೆ ಮಾಡುತ್ತಾರೆ. ಇಲ್ಲಿಯತನಕ ಯಾವ ಸರಕಾರದವರೂ ಕೂಡ ಡಿಪ್ರೀಸಿಯೇಷನ್ ಬಗ್ಗೆ ಚಿಂತನೆ ಮಾಡಿರಲಿಲ್ಲ. ಅದನ್ನೆಲ್ಲಾ ಮಾತನಾಡಿದರೆ ಅದು ರಾಜಕೀಯ ಆಗುತ್ತದೆ ಎಂದು ನಾನು ಹೇಳಬಯಸುವುದಿಲ್ಲ. ಆದ್ದರಿಂದ ಸವಕಳಿಯನ್ನು ನಾವು ಮುರಿದುಕೊಳ್ಳುವುದಿಲ್ಲ, ಲೀಡ್ ಕೊಡುವ ವಿಚಾರದಲ್ಲಿ ಅವರು ಹೇಳಿದ್ದನ್ನು ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ. ಆದ್ದರಿಂದ ಅವರು ಕೋರ್ಟ್‌ಗೆ ಹೋಗುವುದು ಬೇಡ. ಈ ವಿಚಾರದಲ್ಲಿ ಖರ್ಗೆಯವರು ಅವರನ್ನು ಒಪ್ಪಿಸಬೇಕು. ಅದರಿಂದ ರೈತರಿಗೂ ಯಾವ ಪ್ರಯೋಜನ ಆಗುವುದಿಲ್ಲ. ಅದನ್ನೆಲ್ಲಾ ಪರಿಶೀಲಿಸಿಯೇ ಈ ಕೆಲಸವನ್ನು ಮಾಡಿರತಕ್ಕಂಥಾದ್ದು.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯರೇ, ತಾವುಗಳು ಕೋರ್ಟ್‌ಗೆ ಹೋಗಬೇಡಿ ಎಂದು ಹೇಳುತ್ತಿದ್ದೀರಿ. ಆ ಪ್ರಕಾರ ಅವರನ್ನು ಒಪ್ಪಿಸೋಣ. ಆದರೆ ಅವರಿಗೆ ಒಂದು ಅಪೀಲ್ ಹೋಗುವ ಅವಕಾಶ ಬೇಕಾಗುತ್ತದೆ. ನೀವು ಫಿಕ್ಸ್ ಮಾಡಿದ್ದು ಸರಿ ಇಲ್ಲದಿದ್ದರೆ ನಾವು ಎಲ್ಲಿಯಾದರೂ ಒಂದು ಕಡೆ ಅಪೀಲ್ ಮಾಡಬೇಕಲ್ಲವೇ? ಅಪಲೇಟ್ ಅಥಾರಿಟಿ ಒಂದನ್ನು ಮಾಡಿ. ಕೋರ್ಟ್‌ಗೆ ಹೋಗುವುದು ಬೇಡ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಬೇಡಿಕೆಗಳ ಬಗ್ಗೆ ಆದಷ್ಟು ನಾವು ಒಪ್ಪಿಕೊಂಡಿದ್ದೇವೆ. ಈಗ ತಾನೇ ನಮ್ಮ ನೀರಾವರಿ ಮಂತ್ರಿಗಳು ಹೇಳಿದ ಹಾಗೆ ಹಿನ್ನೀರಿನಿಂದ ಆಸ್ತಿಪಾಸ್ತಿ ಮುಳುಗಡೆ ಆದವರಿಗೆ ನಮ್ಮ ಪಕ್ಷದ ಆಂಧ್ರಪ್ರದೇಶದಲ್ಲಿ ಎಷ್ಟು ಪರಿಹಾರ ಕೊಡುತ್ತಾರೋ ಅದಕ್ಕಿಂತ ಎರಡರಷ್ಟು ಹೆಚ್ಚಿಗೆ ನಾವು ಪರಿಹಾರ ಕೊಡುತ್ತಿದ್ದೇವೆ. ಭಾರತ ದೇಶದ ಯಾವುದೇ ಪ್ರಾಜೆಕ್ಟನ್ನು ತೆಗೆದುಕೊಂಡರೂ ಕೂಡ ಈಗ ನಾವು ಕೊಡುತ್ತಿರತಕ್ಕಂಥ ಹಣ ಹೆಚ್ಚಿನದಾಗಿದೆ. ಇದು ತಮಗೆಲ್ಲಾ ಗೊತ್ತಿದೆ. ದಿನಾಂಕ 13-4-1998 ರಂದು ಒಂದು ಆದೇಶವನ್ನು ಹೊರಡಿಸಿ ಅದರಲ್ಲಿ ಏನು ಹೇಳಿದ್ದೇವೆಂದರೆ 'ಕಟ್ಟಡಗಳ ಪರಿಹಾರವನ್ನು ಐತೀರ್ಪಿನ ನಿರ್ಣಯದಂತೆ ಲೋಕೋಪಯೋಗಿ ಇಲಾಖೆಯ ಇತ್ತೀಚಿನ ಜಿಲ್ಲಾ ದರಗಳ ಪಟ್ಟಿ ಅಂದರೆ ಶೆಡ್ಯೂಲ್ಡ್ ರೇಟ್‌ಗೆ ಅನುಗುಣವಾಗಿ ಹಾಗೂ ಸಮಿತಿಯವರು ಮತ್ತು ಮಾಲೀಕರ ಪರಸ್ಪರ ಒಪ್ಪಿಗೆ ಮೇರೆಗೆ ಅಂದರೆ ಒಬ್ಬರಿಂದೊಬ್ಬರಿಗೆ ನೆಗೋಷಿಯೇಟ್ ಮಾಡಿ ಅದನ್ನು ನಿಗದಿಪಡಿಸಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಆದ್ದರಿಂದ ಯಾರೂ ಕೂಡ ಕೋರ್ಟಿಗೆ ಹೋಗಬಾರದು. ಕೋರ್ಟಿಗೆ ಹೋದರೆ ಅವರಿಗೆ ಬರಬೇಕಾಗಿರುವ ಪರಿಹಾರ ಸಿಗುವುದಕ್ಕೆ ವಿಳಂಬವಾಗುತ್ತದೆ, ಪ್ರಾಜೆಕ್ಟ್ ವಿಳಂಬವಾಗುತ್ತದೆ ಮತ್ತು ನಮ್ಮ ಸರ್ಕಾರಕ್ಕೆ ಕೂಡ ಹೆಚ್ಚಿನ ಹೊಣೆ ಬೀಳುತ್ತದೆ. ಕೋರ್ಟಿಗೆ ಹೋಗುವುದರಿಂದ ಸಂಬಂಧಪಟ್ಟ ಪಾರ್ಟಿಗಳಿಗೆ ಅನುಕೂಲವಾಗುವುದಿಲ್ಲ ಮತ್ತು ಸರ್ಕಾರಕ್ಕೂ ಅನುಕೂಲವಾಗುವುದಿಲ್ಲ. ಪ್ರಾಜೆಕ್ಟ್ ಡಿಲೆ ಆಗುತ್ತದೆ. ನಮ್ಮ ರೈತ ಮುಖಂಡರ ಜೊತೆಗೆ ಚರ್ಚೆ ಮಾಡಿ, ನಮ್ಮ ಕ್ಯಾಬಿನೆಟ್‌ನಲ್ಲಿ ಸಂಪೂರ್ಣವಾದಂಥ ಚರ್ಚೆ ನಡೆಸಿ ಈ ಕಾರ್ಯವನ್ನು ಕೈಗೆತ್ತಿಕೊಂಡಿದ್ದೇವೆ.

ಆದ್ದರಿಂದ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅಲ್ಲಿಯ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳು ಮತ್ತು ರೈತರಿಗೆ ತಿಳುವಳಿಕೆ ಹೇಳಿ ಇದರ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಮತ್ತು ಕಂದಾಯ ಸಚಿವರು ಹೇಳಿದ ಹಿನ್ನೆಲೆಯಲ್ಲಿ ಹೇಳುವುದಾದರೆ, ಈ ಪ್ರಸ್ತಾವ ಬಂದಂಥ ಸಂದರ್ಭದಲ್ಲಿ ಕೂಡ ವಿನಾಕಾರಣ ವ್ಯಾಜ್ಯ ಮೊದಲಾದಂಥವುಗಳು ಆಗದೆ ನೇರವಾಗಿ ರೈತನಿಗೆ ಅನುಕೂಲವಾಗಬೇಕೆನ್ನುವ ಕಾರಣದಿಂದ ಸ್ವಲ್ಪ ಹೆಚ್ಚು ಹಣ ಕೊಟ್ಟರೂ ಚಿಂತೆ ಇಲ್ಲ ಎನ್ನುವ ಕಾರಣದಿಂದ ನಾವು ಉದಾರವಾದಂಥ ರೀತಿಯಲ್ಲಿ ಈ ನಿಲುವನ್ನು ತೆಗೆದುಕೊಂಡಿದ್ದೇವೆ. They cannot have the cake and eat too. ಈಗ 1 ಲಕ್ಷ 10 ಸಾವಿರ ರೂಪಾಯಿಗಳು ಬೇಕು ಮತ್ತೆ ಕೋರ್ಟಿಗೆ ಹೋಗಿ ಮೇಲ್ಮನವಿ ಸಲ್ಲಿಸುತ್ತೇವೆಂದು ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಪರಸ್ಪರ ಒಪ್ಪಿಗೆಯಿಂದ ಮಾಡತಕ್ಕಂಥದ್ದು ಸರಿ. ಈಗ ಕನ್ಸೆಂಟ್ ಅವಾರ್ಡ್ ಆದರೆ ಸಂತೋಷ suppose dispute arises naturally you should allow him to go in an appeal.

ಶ್ರೀ ಎಂ. ಪಿ. ಪ್ರಕಾಶ್ : ಈಗ ಏನಾಗಿದೆ ಎಂದರೆ ಪ್ರತಿನಿಧಿಗಳ ಜೊತೆಗೆ, ಶಾಸಕರ ಜೊತೆಗೆ ಮಾತನಾಡಿ ಈ ನಿರ್ಣಯಕ್ಕೆ ಬಂದಿದ್ದೇವೆ. ಮಧ್ಯವರ್ತಿಗಳು ಪರಿಹಾರದ ಹಣವನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಕಡಿಮೆ ಮಾಡಿ ಇದು ನೇರವಾಗಿ ರೈತರಿಗೆ ಮುಟ್ಟಲಿ ಎನ್ನುವಂಥ ಕಾರಣ ಇದ್ದುದರಿಂದ ಈ ವ್ಯವಸ್ಥೆಗೆ ಒಪ್ಪಿಕೊಂಡಿದ್ದೇವೆ. ದಯವಿಟ್ಟು ತಾವು ಸತ್ಯಾಗ್ರಹ ಮಾಡುವವರಿಗೆ ಬುದ್ಧಿ ಹೇಳಿ ಒಪ್ಪಿಸತಕ್ಕಂಥ ಕೆಲಸ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಲ್ಯಾಂಡ್ ಕಾಂಪನ್‌ಸೇಷನನ್ನು ಫಿಕ್ಸ್ ಮಾಡಿರುವ ಬಗ್ಗೆ ಅಲ್ಲಿಯ ರೈತರಿಗೆ ಭಿನ್ನಾಭಿಪ್ರಾಯವಿಲ್ಲ. ಇರಿಗೇಷನ್ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇನ್ನು ಕಬ್ಬಿನ ರೇಟ್ ಬಗ್ಗೆ ಬಿನ್ನಾಭಿಪ್ರಾಯವಿದ್ದು ಅದರ ಬಗ್ಗೆ ಕುಳಿತು ಮಾತನಾಡುತ್ತೇವೆಂದು ಸರ್ಕಾರದ ಕಡೆಯಿಂದ ಹೇಳಿದ್ದೀರಿ. ಇಲ್ಲಿ ಪ್ರಾಪರ್ಟಿ ವ್ಯಾಲ್ಯೂ ಬಗ್ಗೆ ವ್ಯತ್ಯಾಸ ಬರುತ್ತಿದೆ. ಪರಸ್ಪರ ಚರ್ಚೆ ಮಾಡಿ ವ್ಯಾಲ್ಯೂ ಒಪ್ಪಿಗೆ ಆದರೆ ನಾವು ಕೋರ್ಟಿಗೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಒಂದು ವೇಳೆ ಇಬ್ಬರೂ ಪರಸ್ಪರ ಚರ್ಚೆ ಮಾಡಿ ಒಪ್ಪದೆ ಇರತಕ್ಕಂಥ ಮನೆಗಳವರು ಯಾರು ಇರುತ್ತಾರೆ ಅಂಡರ್ ಪ್ರೊಟೆಸ್ಟ್ ಕೋರ್ಟಿಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಲ್ಯಾಂಡ್ ಬಗ್ಗೆ ಯಾರೂ ಕೂಡ ರಿಟ್ ಹಾಕುತ್ತಿಲ್ಲ. ಅವರು ಕೇವಲ ಪ್ರಾಪರ್ಟಿ ವ್ಯಾಲ್ಯೂ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಗೋವಿಂದ ಮುತ್ತಪ್ಪ ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಲ್ಯಾಂಡ್ ಬಗ್ಗೆ ಏನು ಡಿಸ್‌ಪ್ಯೂಟ್ ಇದೆಯೆಂದರೆ 4(1) ನೋಟಿಫಿಕೇಷನನ್ನು ಹೊರಡಿಸಿದ ದಿನಾಂಕದಿಂದ ಇಂಟರೆಸ್ಟ್ ಕೊಡಬೇಕು ಎನ್ನತಕ್ಕಂಥ ಬೇಡಿಕೆ ಇದೆ. ರೇಟಿನ ಬಗ್ಗೆ ಅಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಈಗ 4(1) ನೋಟಿಫಿಕೇಷನ್ ಡೇಟ್‌ನಿಂದ ಕೊಡುವುದಿಲ್ಲ. ಅವರು ಯಾವತ್ತೂ ಇಲ್ಲಿಗೆ ಜಾಥಾ ಬಂದಿದ್ದಾರೆ, ಆ ಜಾಥಾದಿಂದ ಇವೆಲ್ಲಾ ಅಪ್ಲೈ ಆಗಬೇಕೆಂದು ಒಪ್ಪಿಕೊಂಡಿದ್ದಾರೆ. ಅದಕ್ಕೆ ಸರ್ಕಾರವೂ ಸಹ ಒಪ್ಪಿದೆ. ಈಗ ಒಂದು ಪಾಯಿಂಟ್‌ನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದೇನೆಂದರೆ, ಕನ್ಸೆಂಟ್ ಆದರೆ ಪರವಾಗಿಲ್ಲ, ಕನ್ಸೆಂಟ್ ಆಗದೇ ಹೋದರೆ ತಪ್ಪಾಗುತ್ತದೆ ಎಂದು ಹೇಳಿದ್ದಾರೆ. ನಮ್ಮ ಮಾನ್ಯ ಪ್ರಕಾಶ್ ರವರು ಹೇಳಿದ ಹಾಗೆ ಅಲ್ಲಿಯ ರೈತರು ಕನ್ಸೆಂಟ್ ಕೊಡಬೇಕು, ಏಕೆಂದರೆ ಲೋಕೋಪಯೋಗಿ ಇಲಾಖೆಯ ಗೈಡ್‌ಲೈನ್ಸ್ ಇವೆ, ಎಸ್ಟಿಮೇಟ್ ಮಾಡುವುದಕ್ಕೆ ಎಸ್‌ಆರ್ ಇದೆ, ಇದರಂತೆ ನಾವು ಲೆಕ್ಕಹಾಕಿಕೊಂಡು ಮಾಡಿದ ಮೇಲೆ ಅದಕ್ಕೆ ಹೆಚ್ಚುಕಡಿಮೆ ಕನ್ಸೆಂಟ್ ಅವರು ಕೊಡಬೇಕಾಗುತ್ತದೆ. ಕನ್ಸೆಂಟ್ ಅವರು ಕೊಡಲಿಲ್ಲ ಎಂದರೆ ವಿಭಾಗಾಧಿಕಾರಿಗಳ ಮಟ್ಟದ ಸಮಿತಿ ಮಾಡಿ ಅದನ್ನು ರಿವ್ಯೂ ಮಾಡುವ ಹಾಗೆ ಮಾಡುತ್ತೇನೆ. ವಿಭಾಗಾಧಿಕಾರಿಗಳ ಮಟ್ಟದ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲಾಗುವುದು. ಇನ್ನು ಅಲ್ಲಿರತಕ್ಕಂಥವರಿಗೆ ನೌಕರಿ ಕೇಳಿದ್ದಾರೆ. ಆ ಭಾಗದ ರೈತರ ಹಿತಕ್ಕಾಗಿ ನಾವು ಒಂದು ಸರ್ಕಾರಿ ನೋಟಿಫಿಕೇಶನನ್ನು ಹೊರಡಿಸಿದ್ದೇವೆ. ನಮ್ಮಲ್ಲಿ 800 ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಗಳು ಖಾಲಿ ಇವೆ. 300 ಜೂನಿಯರ್ ಇಂಜಿನಿಯರ್ ಹುದ್ದೆಗಳು ಖಾಲಿ ಇವೆ. ಕೆ.ಬಿ.ಜೆ.ಎಲ್. ಮತ್ತು ಯು.ಕೆ.ಪಿ. ಯಲ್ಲಿ ಸುಮಾರು 325 ಹುದ್ದೆಗಳು ಖಾಲಿ ಇರುವಂಥದ್ದು ಮತ್ತು ನೀರಾವರಿ ಇಲಾಖೆಯಲ್ಲಿ 425 ಹುದ್ದೆಗಳು ಖಾಲಿ ಇವೆ. ಕೃಷ್ಣ ಭಾಗ್ಯ ಜಲನಿಗಮದಲ್ಲಿ ಮತ್ತು ಆ ಏರಿಯಾ ಭಾಗದಲ್ಲಿ ಕೆಲಸ ಮಾಡಿದಂಥ ಒಬ್ಬ ಅಭ್ಯರ್ಥಿಗೆ 5 ಪರ್ಸೆಂಟ್ ವೈಯಿಟೇಜ್ ಕೊಡತಕ್ಕಂಥ ಒಂದು ನೋಟಿಫಿಕೇಷನನ್ನು ಈಗ ಹೊರಡಿಸಿದ್ದೇವೆ. ಅಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಂಥ ಸಂದರ್ಭದಲ್ಲಿ ಇವುಗಳನ್ನು ಗಮನದಲ್ಲಿಟ್ಟುಕೊಂಡು ಭರ್ತಿ ಮಾಡುತ್ತೇವೆ.

ಉಪಾಧ್ಯಕ್ಷರು : ಯು.ಕೆ.ಪಿ.ಯಲ್ಲಿ ರೈತರಿಗೆ ಆದಂಥ ತೊಂದರೆ ಬಗ್ಗೆ ನೋಟಿಫಿಕೇಷನ್ ಹೊರಡಿಸಿದ್ದೀರಿ. ಆದರೆ ಮಲಪ್ರಭಾ ಘಟಪ್ರಭಾ ಯೋಜನೆಯಡಿ ಬರತಕ್ಕಂಥ ರೈತರಿಗೆ ಏನು ಮಾಡಿದ್ದೀರಿ? ಆ ರೈತರು ಬೇರೆ ದೇಶದಿಂದ ಬಂದಿದ್ದಾರೇನು? ಮಲಪ್ರಭಾ ಘಟಪ್ರಭಾ ಇಳಕಲ್ ಮುಂತಾದ ಕಡೆ ಜಲಾಶಯಗಳು ಬಂದಿವೆ. ಅಲ್ಲಿಯ ರೈತರಿಗೆ ಕೂಡ ಅನ್ವಯವಾಗುವ ಹಾಗೆ ನೋಟಿಫಿಕೇಷನನ್ನು ತಾವು ಮಾಡಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಕೋಪ ನಮಗೆ ಅರ್ಥವಾಗುತ್ತದೆ. ಇಡೀ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಯೋಜನೆಗಳಿಗೆ ವೈಯಿಟೇಜ್ ಕೊಟ್ಟರೆ ಆವಾಗ ವೈಯಿಟೇಜ್ ಎಂದು ಅನ್ನಿಸುವುದಿಲ್ಲ.

ಉಪಾಧ್ಯಕ್ಷರು : ನೀವು ಯು.ಕೆ.ಪಿ.ಯಲ್ಲಿ ಒಂದೊಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟರೆ ಘಟಪ್ರಭಾ ಮಲಪ್ರಭಾದಲ್ಲಿ 5 ಸಾವಿರ, 10 ಸಾವಿರ ರೂಪಾಯಿಗಳನ್ನು ತೆಗೆದುಕೊಂಡವರು ಈಗಾಗಲೇ ನಿರ್ಗತಿಕರಾಗಿ ಹೋಗಿದ್ದಾರೆ.

ಶ್ರೀ ಬಿ. ಸೋಮಶೇಖರ್ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ರೂರಲ್ ಅಭ್ಯರ್ಥಿಗಳಿಗೆ ವೈಯಿಟೇಜ್ ಇದೆ. ಆ ವೈಯಿಟೇಜ್‌ನಲ್ಲಿ ಅವರುಗಳಿಗೆ ಅವಕಾಶವಿದ್ದೇ ಇರುತ್ತದೆ.

ಆದ್ದರಿಂದ ಪ್ರತ್ಯೇಕವಾಗಿ ಇದಕ್ಕೆ ಒಂದು ಕ್ಯಾಟಗರಿ ಮಾಡುವುದಕ್ಕಾಗುವುದಿಲ್ಲ. ರೂರಲ್ ವೈಯಿಟೇಜ್ ಇದ್ದೇ ಇದೆ. ಇದರಲ್ಲಿ ಅವರು ಸಹಜವಾಗಿ ಅನುಕೂಲ ಪಡೆದುಕೊಳ್ಳಬಹುದಲ್ಲವೇ?

ಉಪಾಧ್ಯಕ್ಷರು : ಯು.ಕೆ.ಪಿ.ಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ವೈಯ್‌ಟೇಜ್ ಮಾಡಿದ್ದಾರೆ. ಅದು ರೂರಲ್ ವೈಯಿಟೇಜ್ ಅಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಉಪಾಧ್ಯಕ್ಷರೆ, ಹಿತರಕ್ಷಣಾ ಸಮಿತಿಯ ಅಧ್ಯಕ್ಷರನ್ನು ಮತ್ತು ಪದಾಧಿಕಾರಿಗಳನ್ನು ಕರೆದು ಮಾತನಾಡುವುದಕ್ಕೆ ನಾಳೆಯ ದಿವಸವನ್ನು ನಿಗದಿ ಮಾಡಬೇಕು.

ಶ್ರೀ ಕೆ. ಎನ್. ನಾಗೇಗೌಡ : ಆಗಲಿ, ಅದರಲ್ಲಿ ತಪ್ಪು ಏನೂ ಇಲ್ಲ. ಅಲ್ಲಿ ಶ್ರೀ ವಾಸಣ್ಣ ದೇಸಾಯಿ ಎನ್ನುವವರು ಬಹಳ ತಿಳುವಳಿಕೆ ಇರತಕ್ಕಂಥ ಅಧ್ಯಕ್ಷರು ಇದ್ದಾರೆ. ಎಲ್ಲಾ ಶಾಸಕರು, ಸಂಸದೀಯ ಸದಸ್ಯರುಗಳಿಗೆ ನಾನು ಅಪೀಲು ಮಾಡುತ್ತಿದ್ದೇನೆ. ದಯವಿಟ್ಟು ಸೋಮವಾರ ಅಥವಾ ಮಂಗಳವಾರ ಸಮಾಲೋಚನೆ ಕಾರ್ಯಕ್ರಮವನ್ನು ಇಟ್ಟುಕೊಳ್ಳೋಣ.

ಶ್ರೀ ಹೆಚ್. ಎನ್. ನಂಜೇಗೌಡ (ಬಸವನ ಗುಡಿ) : ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಏನೇನು ಕನ್ಸೆಷನ್ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಏನೇನು ಮಾಡಬಹುದು ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಿ ಇಲ್ಲಿ ವಿವರವಾಗಿ ಹೇಳಿದ್ದಾರೆ. ಈಗ ಅಲ್ಲಿ ಕೋರ್ಟಿಗೆ ಹೋಗಬೇಕೇ ಅಥವಾ ಬೇಡವೇ ಎನ್ನುವ ಒಂದೇ ಒಂದು ಇಷ್ಯೂ ಇದೆ. ಕೋರ್ಟಿಗೆ ಹೋಗುವುದು ಬೇಡ ಎನ್ನುವುದಕ್ಕೆ ಏನೇನು ಬೇಕೋ ಮಾನ್ಯ ಖರ್ಗೆಯವರೇ, ಇದಕ್ಕೆ ದಯವಿಟ್ಟು ನಾವು ಸಹಾಯ ಮಾಡೋಣ. ಅವರು ಅಪೀಲು ಮಾಡಬೇಕೆಂದಾದರೆ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಲಿ. ಅವರು ಕೋರ್ಟಿಗೆ ಏಕೆ ಹೋಗಬೇಕು? ಆದ್ದರಿಂದ ದಯವಿಟ್ಟು ಸತ್ಯಾಗ್ರಹ ನಿಲ್ಲಿಸಿ, ಮಾತುಕತೆಗೆ ಬನ್ನಿ. ಎಂದು ನಾವು ನೀವು ಸೇರಿ ಸತ್ಯಾಗ್ರಹಿಗಳಿಗೆ ಅಪೀಲು ಮಾಡಿಕೊಳ್ಳೋಣ. ಅವರನ್ನು ಮಾತುಕತೆಗೆ ಕರೆಸಿಕೊಂಡು ಸಮಾಲೋಚನೆ ಮಾಡಿ ನಿರ್ಧರಿಸಬಹುದು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಹಿತರಕ್ಷಣಾ ಸಮಿತಿಯವರು ಆ ಚಳುವಳಿಯನ್ನು ನಿಲ್ಲಿಸಲಿ, ಸೋಮವಾರ ದಿವಸ ಸಭೆ ಕರೆಯುತ್ತೇವೆಂದು ಈ ಸದನ ಮುಖಾಂತರ ಅಲ್ಲಿ ಧರಣಿ ನಡೆಸುತ್ತಿರುವವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಬಾಗಲ ಕೋಟೆ ವಿಚಾರದಲ್ಲಿ ಮಾನ್ಯ ರಾಜಶೇಖರ್‌ರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಾಗಲಕೋಟೆಗೆ 100 ಕೋಟಿ ರೂಪಾಯಿಗಳನ್ನು ಎನ್‌ಮಾರ್ಕ್ ಮಾಡಿದ್ದೇವೆ. ಹೊಸ ಟೌನ್ ಮಾಡಿದ್ದೇವೆ. ಅದು ಬಹಳ ಚೆನ್ನಾಗಿದೆಯೆಂದು ಅವರಿಗೆ ಗೊತ್ತಾಗಿದೆ. ಸೈಟ್‌ಗಳನ್ನೂ ಸಹ ಅಕ್ವೈಯರ್ ಮಾಡಿದ್ದೇವೆ. ಇದೂ ಕೂಡ ಅವರಿಗೆ ಗೊತ್ತಿದೆ. ಅಲ್ಲಿರತಕ್ಕಂಥ ಸೈಟ್ಸ್ ವ್ಯಾಲ್ಯೂಗೆ ಅಡಿಶನಲ್ ರೇಟ್ಸ್ ಕೊಡುವ ಬಗ್ಗೆ ಕೂಡ ಫೈನಲೈಸ್ ಮಾಡಿದ್ದೇವೆ. ಈಗ ಅವರು ಏನು ಹೇಳಿದ್ದಾರೆ ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನು ವಿಶೇಷವಾಗಿ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ದೇವಸ್ಥಾನದ ಸಮಸ್ಯೆ ಇತ್ತು. ಈ ಕೂಡಲ ಸಂಗಮ ಸಂಕೀರ್ಣದ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಉದ್ದೇಶದಿಂದ ಎಲ್ಲಾ ಸ್ವಾಮೀಜಿಗಳನ್ನು

ಕರೆಸಿ, ಅಲ್ಲಿರತಕ್ಕಂಥ ಶಾಸಕರುಗಳನ್ನು ಕರೆಯಿಸಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿ, ಕೂಡಲ ಸಂಗಮ ಸಂಕೀರ್ಣದ ಅಭಿವೃದ್ಧಿ ಎಂದರೆ ರಸ್ತೆ, ದೇವಾಲಯದ ಎಡಭಾಗ ಪ್ರದೇಶದ ಸುಧಾರಣೆ ಮಾಡುವುದಕ್ಕೆ, ಕ್ಯಾಂಟೀನ್, ಪ್ರವಾಸ ಸಂಕೀರ್ಣ, ಭೋಜನ ಮಂದಿರ, ಬಯಲು ಮಂದಿರ, ಸಭಾಮಂಟಪ ಬಸವ ಅಂತರರಾಷ್ಟ್ರೀಯ ಕೇಂದ್ರ ಹಾಗೂ ಮಹಾದ್ವಾರ, ದೇವಾಲಯ ಸಂಕೀರ್ಣ ಮತ್ತು 600 ಎಕರೆ ಪ್ರದೇಶದಲ್ಲಿ ಒಂದು ತೋಟಗಾರಿಕೆ, ನೀರು ಸರಬರಾಜು ವ್ಯವಸ್ಥೆ ಇಷ್ಟು ಕಾರ್ಯಕ್ರಮಗಳು ಸೇರಿ ಸುಮಾರು 27.22 ಕೋಟಿ ರೂಪಾಯಿಗಳ ಆಡಳಿತಾತ್ಮಕ ಮಂಜೂರಾತಿಯನ್ನು ನಮ್ಮ ಸರ್ಕಾರ ಕೊಟ್ಟಿದೆ. ಆ ಹಣವನ್ನು ನೀರಾವರಿ ಇಲಾಖೆಯಿಂದ ಬಳಸಿ ಎರಡು ವರ್ಷಗಳಲ್ಲಿ ಈ ಕೆಲಸವನ್ನು ಸಂಪೂರ್ಣವಾಗಿ ಮುಗಿಸಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಉಪಾಧ್ಯಕ್ಷರು : ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗಿರುವ ಪ್ರದೇಶದ ರೈತರಿಗೆ ಪರಿಹಾರವನ್ನು ಜರೂರಾಗಿ ನೀಡಿಲ್ಲದಿರುವ ಬಗ್ಗೆ ತಂದಿರುವ ನಿಲುವಳಿ ಸೂಚನೆಯನ್ನು ನಿರಾಕರಿಸಲಾಗಿದೆ. ಈಗ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಮಾನ್ಯ ಸಚಿವರ ಗಮನ ಸೆಳೆಯುವುದು.

ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ರಾಜ್ಯದಲ್ಲಿ ವಿದ್ಯುತ್ ಖೋತದಿಂದ ಆಗಿರುವ ತೊಂದರೆ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುತ್ ಖೋತಾದಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಮಾತನಾಡಲು ಶೂನ್ಯ ವೇಳೆಯಲ್ಲಿ ನಮಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ಈಗ ಅಜೆಂಡಾ ಪ್ರಕಾರ ಹೋಗೋಣ. ತಾವೆಲ್ಲಾ ಸಹಕಾರ ಕೊಡಬೇಕು. ನಿನ್ನೆಯ ದಿವಸ ಕೂಡ ವಿಧೇಯಕದ ಮೇಲೆ ಚರ್ಚೆ ಆಗಲಿಲ್ಲ ದಯವಿಟ್ಟು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುತ್ ಖೋತಾದಿಂದಾಗಿ ರಾಜ್ಯದಲ್ಲಿ ಅಧ್ವಾನವಾಗಿ ಹೋಗಿದೆ. ವಿದ್ಯುತ್ ಖೋತಾದಿಂದ ವಿದ್ಯಾರ್ಥಿಗಳಿಗೆ, ರೋಗಿಗಳಿಗೆ, ಜನಗಳಿಗೆ ಬಹಳ ತೊಂದರೆಯಾಗಿದೆ. ಸರ್ಕಾರ ಹೀಗೆ ಮಾಡಿದರೆ ಹೇಗೆ? ವಿದ್ಯುತ್ ಅಭಾವದ ಮೇಲೆ ಚರ್ಚೆ ನಡೆಸಲು ದಯವಿಟ್ಟು ಅವಕಾಶ ಕೊಡಲೇ ಬೇಕು.

ಉಪಾದ್ಯಕ್ಷರು : ನಾವು ಅಜೆಂಡಾದ ಪ್ರಕಾರ ಹೋಗೋಣ. ನಿನ್ನೆಯ ದಿವಸ ಬೇಡಿಕೆ ಮೇಲೆ ಚರ್ಚೆ ಆಗಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ವಿದ್ಯುತ್ ಕಡಿತದಿಂದ ವಿದ್ಯಾರ್ಥಿಗಳಿಗೆ, ರೈತರಿಗೆ ಕುಡಿಯುವ ನೀರಿಗೆ ಹೀಗೆ ಎಲ್ಲದಕ್ಕೂ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರ ಸಮಗ್ರವಾದ ಹೇಳಿಕೆ ಕೊಡಲಿ.